ಸಂಪುಟ 01 | ಸಂಚಿಕೆ 187 ಸೋಮವಾರ 21 ಸೆಪ್ಟೆಂಬರ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

ನೈಜ್ಯ ದೇಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

ಶಿಕ್ಷಕರ ಪತ್ತು ಬೆಳೆಸುವ ಸಹಕಾರಿ ಸಂಘದ 60ನೇ ವಾರ್ಷಿಕ ಮಹಾಸಭೆ
ಸಹಕಾರಿ ಸಂಘದ ಅಭಿವೃದ್ಧಿಗೆ ಸಹಕಾರ ಮುಖ್ಯ: ದಮ್ಮೂರಮಠ

❑ ನೈಜ್ಯ ದೇಸೆ ನ್ಯೂಸ್



ತಾಳಿಕೋಟಿ: ಪ್ರತಿಯೊಬ್ಬರೂ ಸಹಕಾರ ನೀಡಿದರೆ ಮಾತ್ರ ಸಹಕಾರಿ ಸಂಘಗಳ ಬೆಳವಣಿಗೆಯಾಗಲು ಸಾಧ್ಯವಿದೆ. ಸದಸ್ಯರ ನಂಬಿಕೆಯೇ ಸಂಘದ ನಿಜವಾದ ಬಂಡವಾಳ, ಈ ಸಂಘವು ಇಂದು ಹೆಮ್ಮರವಾಗಿ ಬೆಳೆಯಲು ಸದಸ್ಯರ ವಿಶ್ವಾಸವೇ ಕಾರಣವಾಗಿದೆ ಎಂದು ಕ್ಷೇತ್ರ ಸಮನ್ವಯ ಅಧಿಕಾರಿ ಆರ್ ಬಿ ದಮ್ಮೂರಮಠ ಹೇಳಿದರು. ಭಾನುವಾರ ಪಟ್ಟಣದ ಶ್ರೀ ನೀಲಕಂಠೇಶ್ವರ ದೇವಸ್ಥಾನದ ಸಭಾ ಭವನದಲ್ಲಿ ತಾಳಿಕೋಟಿ ವಿಭಾಗದ ಸರಕಾರಿ ಪ್ರಾಥಮಿಕ ಶಿಕ್ಷಕರ ಪತ್ತು ಬೆಳೆಸುವ ಸಹಕಾರಿ ಸಂಘ ನಿ, ಇದರ 60ನೇ ವಾರ್ಷಿಕ ಸರ್ವಸಾಧಾರಣ ಸಭೆಯಲ್ಲಿ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದರು.1966 ರಲ್ಲಿ ಅತ್ಯಲ್ಪ ಶೇರು ಬಂಡವಾಳದೊಂದಿಗೆ ಆರಂಭವಾದ ಈ ಸಂಘವು ಇಂದು ರೂ.15 ಲಕ್ಷ ಲಾಭವನ್ನು ಗಳಿಸಿದೆ ಎಂದರೆ ಇದರ ಪ್ರಗತಿಯ ವೇಗ ನಮಗೆ ತಿಳಿದು ಬರುತ್ತದೆ. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸಾಲಗಳನ್ನು ಪಡೆಯುವುದು ಸುಲಭದ ಕೆಲಸವಲ್ಲ, ಆದರೆ ಈ ಪತ್ತಿನ ಸಹಕಾರಿ ಸಂಘದಲ್ಲಿ ನಮಗೆ ಸರಳವಾಗಿ ಹಾಗೂ ಅಗತ್ಯವಿದ್ದಾಗ ಯಾವ ಸಮಯದಲ್ಲಾದರೂ ಸಾಲ ಸಿಗುತ್ತದೆ. ಆದ್ದರಿಂದ ಸಂಘದ ಸದಸ್ಯರೆಲ್ಲರೂ ಒಂದಾಗಿ ಇದರ ಅಭಿವೃದ್ಧಿ ಕು-ರಿತು ಪರಸ್ಪರ ಸಹಕಾರದೊಂದಿಗೆ ಕೆಲಸ ಮಾಡುವ ಅಗತ್ಯವಿದೆ ಎಂದರು. ಸಂಘದ ಅಧ್ಯಕ್ಷರಾದ ಸುರೇಶ ಆರ್ ವಾಲಿಕಾರ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ ಸಂಘದ ಬೆಳವಣಿಗೆಗೆ ಎಲ್ಲಾ ಸದಸ್ಯರ ಸಹಕಾರವೇ ಕಾರಣವಾಗಿದೆ. ಆಡಳಿತ ಮಂಡಳಿಯ ನಿರ್ಧಾರದಂತೆ ಶೇರುಗಳ ಮೇಲೆ ಶೇ.9ರಂತೆ ಲಾಭಾಂಶ ನೀಡಲಾಗುವುದು. ಇಂದಿನ ಸಭೆಯಲ್ಲಿ ನೀವು ನೀಡುವ ಸಲಹೆ ಸೂಚನೆಗಳನ್ನು ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಚರ್ಚಿಸಿ ಕಾರ್ಯರೂಪಕ್ಕೆ ತರಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇವೆ ಎಂದರು. ಸಂಘದ ಕಾರ್ಯದರ್ಶಿ ಎಸ್ ಎಸ್ ಬೊಮ್ಮನಹಳ್ಳಿ ಸಂಘದ ವಾರ್ಷಿಕ ವರದಿಯನ್ನು ವಾಚಿಸಿದರು. ಇದೇ ಸಂದರ್ಭದಲ್ಲಿ 2025-26 ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಎಸ್ ಎಸ್ ಎಲ್ ಸಿ ಮತ್ತು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.90ಕ್ಕಿಂತಲೂ ಹೆಚ್ಚು ಅಂಕಗಳನ್ನು ಪಡೆದ ಸಂಘದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಾಗೂ ನಿವೃತ್ತ ಶಿಕ್ಷಕರಿಗೆ ಅಭಿನಂದನಾ ಪತ್ರಗಳನ್ನು ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಪ್ರಾ.ಶಾ. ಶಿ. ಸಂಘದ ತಾಲೂಕ ಅಧ್ಯಕ್ಷ ಬಿ.ಟಿ.ವಜ್ಜಲ್, ಉಪಾಧ್ಯಕ್ಷರಾದ ಟಿ. ಎಸ್. ಲಮಾಣಿ, ಶ್ರೀಮತಿ ಆರ್ ಬಿ ಆಲೂರ, ಪ್ರಧಾನ ಕಾರ್ಯದರ್ಶಿ ಎಸ್. ಬಿ.ಬೀರಗೊಂಡ, ಎನ್ ಜಿಓ ಪ್ರಧಾನ ಕಾರ್ಯದರ್ಶಿ ಶಂಕರಗೌಡ ಬಿರಾದಾರ, ಶಿಕ್ಷಕರ ಪತ್ತು ಬೆಳೆಸುವ ಸಹಕಾರಿ ಸಂಘದ ಉಪಾಧ್ಯಕ್ಷ ಪಿ.ವಾಯ್.ಚಲವಾದಿ, ನಿರ್ದೇಶಕರಾದ ಯು.ಜಿ.ಮಕಾನದಾರ, ಶಿವಪ್ಪ ಬೈಚಬಾಳ, ಕಾಶೀಮ ಜಮಾದಾರ, ಜಿ.ಕೆ. ಪತ್ತಾರ, ಆರ್. ಕೆ.ಹಂಚಾಟೆ, ಡಿ. ಸಿ. ಕಲಾಲ, ಎಸ್. ಎಂ. ಬಂಟನೂರ, ಎ□□□ಸ್ ಬಿಂಜಲಭಾವಿ, ಬಸವರಾಜ ಹುಲ್ಲೂರ, ನಿರ್ದೇಶಕೀಯರಾದ ಜಿ.ಟಿ. ಬಿರಾದಾರ, ಝುಡ್. ಎಂ.ಅರ್ಜುಣಗಿ ಹಾಗೂ ಸಂಘದ ಶೇರುದಾರರು ಉಪಸ್ಥಿತರಿದ್ದರು. ಶಿಕ್ಷಕ ರಾಚಯ್ಯ ಪ್ರಾರ್ಥಿಸಿದರು. ನಿರ್ದೇಶಕ ಎ□□□ಂ ಬೈಚಬಾಳ ಸ್ವಾಗತಿಸಿದರು.ಶಿಕ್ಷಕಿ, ಸಾಹಿತಿ ಮಡಿವಾಳಮ್ಮ ನಾಡಗೌಡ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

ಸಹಕಾರ ಸಂಘಕ್ಕೆ ಸುಮಾರು 1 ಲಕ್ಷ 32 ಸಾವಿರ ನಿವ್ವಳ ಲಾಭ

❑ ನೈಜ್ಯ ದೇಸೆ ನ್ಯೂಸ್



ಬಳ್ಳಾರಿ / ಕಂಪ್ಲಿ : ಪಟ್ಟಣದ ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಆವರಣದಲ್ಲಿ ಟಿ.ರಾಮು ಅವರ ಸಭಾಧ್ಯಕ್ಷತೆಯಲ್ಲಿ 77 ವಾರ್ಷಿಕ ಮಹಾಜನ ಸಭೆ ಬುಧವಾರ ನಡೆಯಿತು.ನಂತರ ಮುಖ್ಯಕಾರ್ಯನಿರ್ವಾಹಕ ಕೆ.ವಿರೇಶ ವಾರ್ಷಿಕ ವರದಿ ಮಂಡಿಸಿ ಮಾತನಾಡಿ, ಸಂಘವು 2550 ಜನ ಸದಸ್ಯರೊಂದಿಗೆ ಸುಮಾರು 29 ಲಕ್ಷ 6 ಸಾವಿರ ಶೇರು ಬಂಡವಾಳ ಹೊಂದಿದೆ. ಸುಮಾರು 95 ಲಕ್ಷ 62 ಸಾವಿರ ದುಡಿಯುವ ಬಂಡವಾಳ ಹೊಂದಿದೆ. ಸುಮಾರು 3 ಕೋಟಿ 53 ಲಕ್ಷ 11 ಸಾವಿರ ರಸಗೊಬ್ಬರ ವ್ಯವಹಾರ ನಡೆಸಿದ್ದು, ಸುಮಾರು 19 ಲಕ್ಷ 48 ಸಾವಿರ ವ್ಯಾಪಾರಿ ಲಾಭಗಳಿಸಿದೆ. 2025-26ನೇ ಸಾಲಿನಲ್ಲಿ ಸಂಘವು ಸುಮಾರು 1 ಲಕ್ಷ 32 ಸಾವಿರ ನಿವ್ವಳ ಲಾಭ ಹೊಂದಿದೆ. ಸಂಘದ ಅಭಿವೃದ್ಧಿಗೆ ಪ್ರತಿಯೊಬ್ಬು ಕೈಜೋಡಿಸಬೇಕು ಎಂದರು. ಇಲ್ಲಿನ ಸೊಸೈಟಿಯ ರಸಗೊಬ್ಬರ ವ್ಯವಹಾರದಲ್ಲಿ ಈ ಹಿಂದೆ ಅವ್ಯವಹಾರ ನಡೆದಿದ್ದು, ಈಗಾಗಲೇ ಪ್ರಕರಣ ಕೋರ್ಟ್ನಲ್ಲಿರುವುದರಿಂದ ಇದರ ಮಾಹಿತಿಯನ್ನು ರೈತರಿಗೆ ನೀಡುವ ಜೊತೆಗೆ ಅವ್ಯವಹಾರ ತನಿಖೆ ನಡೆಸಿ, ಸೂಕ್ತಕ್ರಮದೊಂದಿಗೆ ಅವ್ಯವಹಾರದ ಹಣ ವಸೂಲಾತಿ ಮಾಡಿ, ಸಂಘದ ಅಭಿವೃದ್ಧಿಗೆ ಮುಂದಾಗಬೇಕು. ಸಂಘದ ಪ್ರತಿಯೊಂದು ಅಂಕಿ ಅಂಶಗಳ ಮಾಹಿತಿ ನೀಡಬೇಕು. ಮತ್ತು ಶೇರುದಾರ-ರಿಗೆ ಡಿವಿಡೆಂಟ್ ನೀಡಬೇಕು. ಹೀಗೆ ಹಲವು ಸಮಸ್ಯೆಗಳಿದ್ದು, ಕೂಡಲೇ ಪ್ರಸ್ತುತ ಸಹಕಾರಿ ಸಮಿತಿಯವರು ಹಾಗೂ ಮುಖ್ಯಕಾರ್ಯನಿರ್ವಾಹಕರು ಜವಾಬ್ದಾರಿಯುತವಾಗಿ ಪರಿಹ-ರಿಸಬೇಕು. ಈ ಹಿಂದೆ ನಡೆದ ಅವ್ಯವಹಾರದ ಸಂಬಂಧ ಡಿಆರ್ಒಗೆ ದೂರು ನೀಡಿ, ತುರ್ತಾಗಿ ತನಿಖೆಗೆ ಆಗ್ರಹಿಸಿ, ನ್ಯಾಯಸಮ್ಮತವಾಗಿ ಪರಿಶೀಲಿಸಿ, ನ್ಯಾಯಕ್ಕಾಗಿ ಸಭಾಧ್ಯಕ್ಷರು ಜವಾಬ್ದಾರಿ ತೆಗೆದುಕೊಳ್ಳಬೇಕು ಎಂದು ರೈತ ಮುಖಂಡರಾದ ಅಗಳಿ ಪಂಪಾಪತಿ, ಆದೋನಿ ರಂಗಪ್ಪ, ಇಟಗಿ ಬಸವರಾಜಗೌಡ, ಜಿ.ಲಿಂಗನಗೌಡ ಸೇರಿದಂತೆ ಅನೇಕು ರೈತರು ತಿಳಿಸಿದರು. ಸಂಘದ ಅಧ್ಯಕ್ಷ ಕಡೆಮನೆ ನಾಗರಾಜ ವಾರ್ಷಿಕ ಸಭೆ ಸಮಾರಂಭ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷೆ ಜಿ.ಅಯ್ಯಮ್ಮ, ಕೆ.ದೊಡ್ಡಬಸಪ್ಪ, ಅಳ್ಳಿ ನಾಗರಾಜ, ಪಿ.ಚೊಕ್ಕರಾವ್, ಅರಳೆ ಮುತ್ತಯ್ಯ, ಹನುಮಂತಪ್ಪ ಕುರುಬರು, ವಿ.ಬಿ.ನಾಗರಾಜ, ಆಂಜನೇಯಲು, ಗೌಡ್ರು ಅಂಜಿನಪ್ಪ, ಕೆ.ಭಾಸ್ಕರ್ರೆಡ್ಡಿ, ಕೆ.ರಾಧ, ಹೆಚ್.ಲಿಂಗಪ್ಪ(ಸರ್ಕಾರಿ ನಾಮಿನಿ), ಅಪೆಕ್ಸ್ ಬ್ಯಾಂಕ್ ನಿರ್ದೇಶಕ ಪಿ.ಮೂಕಯ್ಯಸ್ವಾಮಿ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ಶ್ರೀನಿವಾಸರಾವ್, ಮುಖಂಡರಾದ ವೆಂಕಟರಾಮರಾಜು, ಕೊಟ್ಟೂರು ರಮೇಶ, ಟಿ.ರಮಣಯ್ಯ, ಭಟ್ಟ ಪ್ರಸಾದ್, ಸಿ.ಯಂಕೋಬ ಸೇರಿದಂತೆ ರೈತರು ಹಾಗೂ ಸಿಬ್ಬಂದಿ ಇದ್ದರು.

ಪ್ರಶಿಕ್ಷಣಾರ್ಥಿಗಳು ಉತ್ತಮ ಶಿಕ್ಷಕರಾಗಲು ರೂಢಿ ಪಾಠಗಳು ಸಹಕಾರಿ : ಮಹಾಂತೇಶ ಓಲೇಕಾರ

❑ ನೈಜ್ಯ ದೇಸೆ ನ್ಯೂಸ್



ಮಾನ್ವಿ : ಪ್ರಶಿಕ್ಷಣಾರ್ಥಿಗಳು ಬಿ.ಎಡ್. ತರಬೇತಿಯಲ್ಲಿ ರೂಢಿಪಾಠ ಎಂಬುದು ಕೇವಲ ಒಂದು ಪರೀಕ್ಷೆ ಅಥವಾ ಅಂಕ ಗಳಿಸುವ ಪ್ರಕ್ರಿಯೆಯಲ್ಲ. ಅದು ಒಬ್ಬ ಸಾಮಾನ್ಯ ವಿದ್ಯಾರ್ಥಿಯನ್ನು ಸಮಾಜಕ್ಕೆ ಬೆಳಕಾಗಬಲ್ಲ ಶಿಕ್ಷಕನನ್ನಾಗಿ ಪರಿವರ್ತಿಸುವ ಪವಿತ್ರವಾದ ಕಾರಖಾನೆ. ಪ್ರಶಿಕ್ಷಣಾರ್ಥಿಗಳು ಉತ್ತಮ ಶಿಕ್ಷಕರಾಗಲು ರೂಡಿ ಪಾಠಗಳು ಸಹಕಾರಿಯಾಗಿವೆ ಎಂದು ಶ್ರೀ ವೆಂಕಟೇಶ್ವರ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಮಹಾಂತೇಶ ಓಲೇಕಾರ ಹೇಳಿದರು. ಪಟ್ಟಣದ ಶ್ರೀ ವೆಂಕಟೇಶ್ವರ ಪ್ರೌಢ ಶಾಲೆಯಲ್ಲಿ ಶಾರದಾ ವಿದ್ಯಾನಿಕೇತನ ಬಿ ಇಡಿ ಕಾಲೇಜು ಮಾನ್ವಿ, ಪ್ರಶಿಕ್ಷಣಾರ್ಥಿಗಳಿಂದ ಸಮಾರೋಪ ಸಮಾರಂಭ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.ತರಗತಿ ಕೋಣೆಯ ನಾಲ್ಕು ಗೋಡೆಗಳ ಮಧ್ಯೆ ಬೋರ್ಡ್ ಸೀಮೆಸುಣ್ಣ ಹಿಡಿದು ನಿಂತಾಗ ಅನುಭವಕ್ಕೆ ಬರುವ ಜವಾಬ್ದಾರಿ ಇದೆಯಲ್ಲ ಅದು ಯಾವುದೇ ಸಿದ್ಧಾಂತದ ಪುಸ್ತಕಗಳಲ್ಲೂ ಸಿಗುವುದಿಲ್ಲ. ಇಂದು ಶಿಕ್ಷಣ ಕ್ಷೇತ್ರ ಬಹಳಷ್ಟು ಬದಲಾಗಿದೆ. ತಂತ್ರಜ್ಞಾನ ಬೆಳೆದಿದೆ ಕಲಿಕಾ ವಿಧಾನಗಳು ನವೀನಗೊಂಡಿವೆ ಆದರೆ ಆತ್ಮೀಯತೆ ತಾಳ್ಮೆ ಮತ್ತು ಕಳಕಳಿಗೆ ಯಾವುದೇ ತಂತ್ರಜ್ಞಾನವೂ ಪರ್ಯಾಯವಾಗಲಾರದುಎಂದು ಪ್ರಶಿಕ್ಷಣಾರ್ಥಿಗಳಿಗೆ ಕಿವಿ ಮಾತು ಹೇಳಿದರು. ನಂತರ ಶಂಕರಪ್ಪ ನಕ್ಕುಂದಿ ಮಾತನಾಡಿ ಪ್ರಶಿಕ್ಷಣಾರ್ಥಿಗಳು ತರಗತಿಯಲ್ಲಿ ಮಾಡುವ ಪಾಠ ಮಕ್ಕಳ ತಲೆಗೆ ತಲುಪಿದರೆ ಸಾಲದು, ಅವರ ಮನಸ್ಸಿಗೆ ತಲುಪಬೇಕು.ಈ ರೂಢಿಪಾಠದ ಅವಧಿಯಲ್ಲಿ ನೀವು ಮಕ್ಕಳ ವಿವಿಧ ಮನಸ್ಥಿತಿಗಳನ್ನು ಅರ್ಥೈಸಿಕೊಳ್ಳುವುದನ್ನು ಕಲಿತಿದ್ದೀರಿ.ವಿಷಯವನ್ನು ಎಷ್ಟು ಸರಳವಾಗಿ ಹಾಗೂ ಆಕರ್ಷಕವಾಗಿ ಮಂಡಿಸಬೇಕು ಎಂಬುದನ್ನು ಅಭ್ಯಾಸ ಮಾಡಿದ್ದೀರಿ.ಒಬ್ಬ ಒಳ್ಳೆಯ ಶಿಕ್ಷಕ ಸದಾ ಕಲಿಯುವ ವಿದ್ಯಾರ್ಥಿಯಾಗಿರಬೇಕು ಎಂಬ ಸತ್ಯವನ್ನು ಅರಿತಿದ್ದೀರಿ. ಶಿಕ್ಷಕ ವೃತ್ತಿ ಎನ್ನುವುದು ಕೇವಲ ಜೀವನೋಪಾಯಕ್ಕೆ ಮಾಡುವ ಕೆಲಸವಲ್ಲ. ಪ್ರತಿಯೊಬ್ಬ ಮಗುವಿನ ಭವಿಷ್ಯವನ್ನು ದೇಶದ ನಾಯಕತ್ವವನ್ನು ರೂಪಿಸುವ ಪವಿತ್ರ ಜವಾಬ್ದಾರಿ ನಿಮ್ಮ ಮೇಲಿದೆ ಎಂದು ಹೇಳಿದರು. ಉಪನ್ಯಾಸಕರಾದ ಆಂಜನೇಯ ನಸಲಾಪುರ ಮಾತನಾಡಿ ಪ್ರಶಿಕಣಾರ್ಥಿಗಳು ವಿದ್ಯಾರ್ಥಿಗಳಿಗೆ ಕಲಿಸಲಿಕ್ಕೆ ಮತ್ತು ತಾವು ಕಲಿಯುದಕ್ಕೆ ಸಹಕರಿಯಾಗುತ್ತದೆ. ಕಾಲೇಜಿನ ಹಂತದಲ್ಲಿ ಅಣುಬೋಧನೆ ಹಾಗೂ ಕಾಲೇಜು ಆಧಾ-ರಿತ ಪಾಠಬೋಧನೆಗಳು ರೂಡಿ ಪಾಠಗಳಿಗೆ ಸಹಕಾರಿ ಯಾಗುತ್ತವೆ. ತರಗತಿಯಲ್ಲಿ ಆಡುವ ಪ್ರತಿಯೊಂದು ಮಾತು, ತೋರಿಸುವ ಪ್ರೀತಿ ಮಗುವಿನ ಇಡೀ ಜೀವನದ ಮೇಲೆಯೇ ಪ್ರಭಾವ ಬೀರಬಹುದು.ನಿಮಗೆ ಪ್ರಾಯೋಗಿಕವಾಗಿ ಮಾರ್ಗದರ್ಶನ ನೀಡಿದ ಶಾಲೆಯ ಶಿಕ್ಷಕರಿಗೂ ಹಾಗೂ ನಿಮ್ಮನ್ನು ಈ ಹಂತಕ್ಕೆ ತಂದಿಟ್ಟ ಕಾಲೇಜಿನ ಗುರುಗಳಿಗೂ ಈ ಸಂದರ್ಭದಲ್ಲಿ ಕೃತಜ್ಞತೆ ಸಲ್ಲಿಸುವುದು ಪ್ರಶಿಕ್ಷಣಾರ್ಥಿಗಳ ಕರ್ತವ್ಯ ಎಂದು ಹೇಳಿದರು. ಕಾರ್ಯಕ್ರದ ಅಧ್ಯಕ್ಷತೆಯನ್ನು ಚಂದ್ರಶೇಖರ ಪಾಟೀಲ್ ವಹಿಸಿ ಮಾತನಾಡಿ ಪ್ರಶಿಕ್ಷಣಾರ್ಥಿಗಳ ಮುಂದಿನ ಶಿಕ್ಷಕ ವೃತ್ತಿಜೀವನ ಯಶಸ್ವಿಯಾಗಲಿ. ನೀವು ನೂರಾರು ವಿದ್ಯಾರ್ಥಿಗಳ ಜೀವನದಲ್ಲಿ ಜ್ಞಾನದ ದೀವಿಗೆಯನ್ನು ಬೆಳಗಿಸುವಂತಾಗಲಿ. ಬಿ. ಇಡಿ ಯನ್ನು ಮಾಡಿ ಮುಗಿಸಿದ ಮೇಲೆ ಈ ವೃತ್ತಿಯ ಮೇಲೆ ಅವಲಂಬನೆಯಾಗದೆ ವಿವಿಧ ಹುದ್ದೆಗಳಿಗೆ ಸರಕಾರ ಅಧಿಸೂಚನೆ ಹೊರಡಿಸಿದೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆದು ಯಶಸ್ವಿಯಾಗಿ ಎಂದು ಹೇಳಿದರು. ಪ್ರಶಿಕ್ಷಣಾರ್ಥಿಗಳು ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಹೊನ್ನಪ್ಪ ಕಟ್ಟಿಮನಿ ಹಿರಿಯ ಪತ್ರ ಕರ್ತರು, ಶಿಕ್ಷಕಿಂ-ಯರಾದ ಸುಮಂಗಳ, ರೂಬಿಯಾ, ಅಮರಮ್ಮ ಹಾಗೂ ಪ್ರಶಿಕ್ಷಣಾರ್ಥಿಗಳು ವಿದ್ಯಾರ್ಥಿಗಳು ಉಪಸ್ಥಿತ-ರಿದ್ದರು.ಪ್ರಾರ್ಥನೆ ಗೀತೆಯನ್ನು ಲಲಿತಾ ಸಂಗಡಿಗರು ಹಾಡಿದರು.ಕಾರ್ಯಕ್ರಮದ ನಿರೂಪಣೆಯನ್ನು ಪ್ರಶಿಕ್ಷಣಾರ್ಥಿಯಾದ ರಾಜೇಶ್ವರಿ ನೆರವೇರಿಸಿದರು. ಮಹಾಂತೇಶ ಸ್ವಾಗತಿಸಿದರು, ಪವನಕುಮಾರ ವಂದಿಸಿದರು.

ಈ ದಿನದ ವಿಶೇಷ

1) International Day of Peace (World Peace Day) – ವಿಶ್ವದಾದ್ಯಂತ ಶಾಂತಿ, ಅಹಿಂಸೆ ಮತ್ತು ಸಹೋದರತ್ವವನ್ನು ಉತ್ತೇಜಿಸುವ ದಿನ.

2) World Alzheimer's Day – ಅಲ್ಜೈಮರ್ ಕಾಯಿಲೆಯ ಬಗ್ಗೆ ಜಾಗೃತಿ ಮೂಡಿಸುವ ಮತ್ತು ರೋಗಿಗಳು ಹಾಗೂ ಕುಟುಂಬಗಳಿಗೆ ಬೆಂಬಲ ನೀಡುವ ದಿನ.

3) World Gratitude Day – ಜೀವನದಲ್ಲಿರುವ ಒಳ್ಳೆಯ ಸಂಗತಿಗಳು ಮತ್ತು ಜನರಿಗೆ ಕೃತಜ್ಞತೆ ಸಲ್ಲಿಸುವ ದಿನ.

ಸುಭಾಷಿತ

ಒಮ್ಮೆ ನೀವು ಯಾವುದಾದರೂ ಕೆಲಸ ಮಾಡಲು ಪ್ರಾರಂಭಿಸಿದ ಬಳಿಕ ಸೋಲಿನ ಬಗ್ಗೆ ಭಯ ಪಡಬೇಡಿ ಅಥವಾ ಹಿಂದಡಿ ಇಡಬೇಡಿ

–ಚಾಣಕ್ಯ

ದೇವಸ್ಥಾನ ಜೀರ್ಣೋದ್ಧಾರಕ್ಕೆ ಪಾಟೀಲರಿಂದ ದೇಣಿಗೆ

❑ ನೈಜ್ಯ ದೇಸೆ ನ್ಯೂಸ್

ತಾಳಿಕೋಟಿ: ರಾಜವಾಡೆಯಲ್ಲಿರುವ ಮೂಲಸ್ಥಾನೇಶ್ವರ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಪಟ್ಟಣದ ಗೌಡಕಿ ಮನೆತನದ ಹಿರಿಯ ಸದಸ್ಯರು, ಪುರಸಭೆ ಮಾಜಿ ಅಧ್ಯಕ್ಷರಾದ ಬಾಪು ಗೌಡ ಸಂಗನಗೌಡ ಪಾಟೀಲ



ಇವರು 10010-00 (ಒಂದು ಲಕ್ಷದಾ ಒಂದು) ರೂಪಾಯಿ ದೇವಣಿಗೆ ಕೊಟ್ಟು ತಮ್ಮ ಭಕ್ತಿ ಭಾವ ಮೆರೆದಿದ್ದಾರೆ. ಈ ಸಂದರ್ಭದಲ್ಲಿ ಅವರು ಮಾತನಾಡಿ ರಾಜುವಾಡೆಯಲ್ಲಿರುವ ಶ್ರೀ ಮೂಲ ಸ್ಥಾನೇಶ್ವರ ದೇವಸ್ಥಾನವು ಅತ್ಯಂತ ಪುರಾತನ ಐತಿಹಾಸಿಕ ಇತಿಹಾಸವನ್ನು ಹೊಂದಿದ ದೇವಸ್ಥಾನವಾಗಿದ್ದು, ಅದು ಅಲ್ಲಲ್ಲಿ ಸಿಥಿಲಗೊಂಡಿದೆ ಆದ್ದರಿಂದ ಈದರ ಜೀರ್ಣೋದ್ಧಾರ ಅತ್ಯಗತ್ಯವಾಗಿದ್ದು ನಾನು ನನ್ನ ಶಕ್ತಾನುಸಾರ ಇವತ್ತು ಒಂದು ಲಕ್ಷ ಗೇಣಿಗೆ ಕೊಟ್ಟಿದ್ದೇನೆ ಎಲ್ಲರೂ ಈ ಪುಣ್ಯದ ಕಾರ್ಯದಲ್ಲಿ ಸಹಕ-ರಿಸಬೇಕು ಎಂದರು. ಈ ಸಂದರ್ಭದಲ್ಲಿ ಸಮಿತಿಯ ಪದಾಧಿಕಾ-ರಿಗಳಾದ ಡಿ.ವಿ. ಪಾಟೀಲ,ಬಿ.ಎಂ.ಪಾಟೀಲ, ಪ್ರಕಾಶ ಸಾಸಬಾಳ, ಬಸವರಾಜ ಕಶೆಟ್ಟಿ, ಮಲ್ಲಿಕಾರ್ಜುನ ಹಿಪ್ಪರಗಿ ಮತ್ತೀತರರು ಇದ್ದರು.

ಸಂಘದ ಅಭಿವೃದ್ಧಿಗೆ ಶೇರುದಾರರ ಸಹಕಾರ ಮುಖ್ಯ: ಬಗಲಿ

❑ ನೈಜ್ಯ ದೇಸೆ ನ್ಯೂಸ್



ತಾಳಿಕೋಟಿ: ಗ್ರಾಮೀಣ ಭಾಗದ ರೈತಾಪಿ ಜನರನ್ನು ಆರ್ಥಿಕವಾಗಿ ಸಬಲೀಕರಿಸಲು ಸ್ಥಾಪಿಸಲಾದ ಸಹಕಾರಿ ಸಂಘಗಳ ಬೆಳವಣಿಗೆಯಲ್ಲಿ ರೈತರ ಪಾತ್ರ ಮಹತ್ವದ್ದಾಗಿದೆ. ಸಂಘದ ಬೆಳವಣಿಗೆಗೆ ಶೇರುದಾರರ ಸಹಕಾರ ಅತ್ಯಗತ್ಯವಾಗಿದೆ ಎಂದು ತಮದಡ್ಡಿ ಸಹಕಾರಿ ಸಂಘದ ಅಧ್ಯಕ್ಷರಾದ ಬಸನಗೌಡ ಬಗಲಿ ಹೇಳಿದರು. ತಾಲೂಕಿನ ತಮದಡ್ಡಿ ಗ್ರಾಮದ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘ ನಿಯಮಿತ ಇದರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ರವಿವಾರ ಅವರು ಮಾತನಾಡಿದರು. ರೈತರು ಸಂಘದಿಂದ ಪಡೆದುಕೊಂಡ ಸಾಲಗಳನ್ನು ಸಕಾಲಕ್ಕೆ ಮರುಪಾವತಿಸಿ ಸಂಘದ ಅಭಿವೃದ್ಧಿಗೆ ಸಹಕ-ರಿಸಬೇಕು ಎಂದರು. ಸಂಘದ ಮುಖ್ಯ ಕಾರ್ಯನಿರ್ವಾಹಕ ಅಧಿಕಾ-ರಿಗಳಾದ ಐ. ಸಿ. ಸಾಸನೂರ ಅವರು ಸಂಘದ ವಾರ್ಷಿಕ ವರದಿಯನ್ನು ವಾಚಿಸಿ ಸಂಘವು ಪ್ರಸಕ್ತ ವರ್ಷದಲ್ಲಿ 1398 ಶೇರುದಾರರನ್ನು ಹೊಂದಿದ್ದು, 9.70 ಕೋಟಿ ದುಡಿಯುವ ಬಂಡವಾಳ, 84.56 ಲಕ್ಷ ಶೇರು ಬಂಡವಾಳ, 1.94 ಕೋಟಿ ಠೇವುಗಳು ಹಾಗೂ 850 ರೈತರಿಗೆ ಸುಮಾರು 6.65 ಕೋಟಿ ಸಾಲಗಳನ್ನು ನೀಡಿದ್ದು ಸಂಘ ಪ್ರತಿ ವರ್ಷವೂ ಪ್ರಗತಿಯನ್ನು ಸಾಧಿಸುತ್ತಿದೆ ಎಂದರು. ಕಾರ್ಯಕ್ರಮದಲ್ಲಿ ಉಪಾಧ್ಯಕ್ಷರಾದ ಸಂಗಣ್ಣ ಕರಡ್ಡಿ, ನಿರ್ದೇಶಕರಾದ ಸಿದ್ದನಗೌಡ ಅಂಗಡಗೇರಿ, ಸಿದ್ದನಗೌಡ ಬಸರಕೋಡ, ಬೀರಪ್ಪ ದೇವಣಗಾಂವ, ಬಸಮ್ಮ ಚಂ.ಕೋಳೂರ, ನೀಲಮ್ಮ ಸೋ.ಬಂಟನೂರ, ಬಸನಗೌಡ ಕುಂಟರೆಡ್ಡಿ, ರಾಮನಗೌಡ ಮಿಣಜಗಿ, ಧೂಳಪ್ಪ ದೊಡ್ಡಮನಿ, ಭೀಮಣ್ಣ ವಾಲಿಕಾರ, ವಾಲಪ್ಪ ಲಮಾಣಿ, ಸಂಘದ ಶೇರದಾರರು ಹಾಗೂ ಗ್ರಾಮದ ಗಣ್ಯರು ಹಿರಿಯರು ಉಪಸ್ಥಿತರಿದ್ದರು.

ನೈಜ್ಯ ದೇಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

ಸಾಹಿತ್ಯ ಸಿಂಚನ

ಕಳೆದುಹೋದ ನಗುವಿನ ಹುಡುಕಾಟ

ಕನ್ನಡಿ ಮುಂದೆ ನಿಂತಾಗ ಇಂದು,
ಮುಖವಿದೆ ಆದರೆ ನಗು ಕಾಣದು,
ಕಣ್ಣಿನಲ್ಲಿ ಸಾವಿರ ಮಾತಿದ್ದರೂ,
ಮನದ ನೋವು ಮಾತ್ರ ಹೊರಬರದು.

ಒಮ್ಮೆ ಸಣ್ಣ ಕ್ಷಣವೂ ಸಾಕಾಗಿತ್ತು,
ತುಟಿಗಳ ಮೇಲೆ ನಗು ಮೂಡಿಸಲು,
ಇಂದು ಸಾವಿರ ಕಾರಣಗಳಿದ್ದರೂ,
ಮನಸ್ಸು ಸಿದ್ಧವಿಲ್ಲ ನಗಲು.

ಹಳೆಯ ದಿನಗಳ ದಾರಿಯಲ್ಲಿ ನಡೆದು,
ಮರೆತ ಸಂತೋಷವ ಹುಡುಕುತ್ತೇನೆ,
ಬಾಲ್ಯದ ಆ ಮುಗ್ಧ ನಗುವನ್ನು,
ನೆನಪುಗಳ ನಡುವೆ ಕರೆಯುತ್ತೇನೆ.

ಕಳೆದುಹೋದ ಕ್ಷಣಗಳು ಹೇಳುತ್ತವೆ,
"ನಿನ್ನ ನಗು ಇನ್ನೂ ನಿನ್ನೊಳಗಿದೆ,"
ಮನದ ಬಾಗಿಲು ತೆರೆದು ನೋಡಿದರೆ,
ಅದು ಮೌನದ ಹಿಂದೆ ಅಡಗಿದೆ.

ಕಣ್ಣೀರಿನ ಹನಿಗಳ ನಡುವೆ ಕೂಡ,
ಒಂದು ಪುಟ್ಟ ಭರವಸೆ ಉಳಿದಿದೆ,
ಕತ್ತಲಾದ ಈ ಬದುಕಿನ ದಾರಿಯಲ್ಲಿ,
ಹೊಸ ನಗುವಿನ ಬೆಳಕು ಕಾದಿದೆ.

ನಿನ್ನೆ ಕಳೆದುಕೊಂಡ ನಗುವಿಗಾಗಿ,
ಇಂದು ಹುಡುಕಾಟ ಮುಂದುವರಿಯಲಿ,
ನಾಳೆಯ ಹೊಸ ಪ್ರಭಾತದೊಂದಿಗೆ,
ನನ್ನ ನಗು ಮತ್ತೆ ಅರಳಲಿ.

ದೇವದುರ್ಗ ತಾಲೂಕು ಕಾಂಗ್ರೆಸ್ ಮುಖಂಡ–ರಿಂದ ಕೆ. ಶಾಂತಪ್ಪ ಅವರಿಗೆ ಸನ್ಮಾನ

❑ ನೈಜ್ಯ ದೆಸೆ ನ್ಯೂಸ್



ರಾಯಚೂರು, ಸೆ.20: ರಾಯಚೂರಿನಲ್ಲಿ ಇಂದು ಕಾಂಗ್ರೆಸ್ ಪಕ್ಷದ ನೂತನ ಜಿಲ್ಲಾಧ್ಯಕ್ಷರಾಗಿ ಕೆ. ಶಾಂತಪ್ಪ ಅವರು ಪದಗ್ರಹಣ ಮಾಡಿದ ಕಾರ್ಯಕ್ರಮದಲ್ಲಿ ದೇವದುರ್ಗ ಹಾಗೂ ಜಾಲಹಳ್ಳಿ ವ್ಯಾಪ್ತಿಯ ಕಾಂಗ್ರೆಸ್ ಮುಖಂಡರು ಭಾಗವಹಿಸಿ, ನೂತನ ಜಿಲ್ಲಾಧ್ಯಕ್ಷರನ್ನು ಆತ್ಮೀಯವಾಗಿ ಸನ್ಮಾನಿಸಿದರು.ಈ ಸಂದರ್ಭದಲ್ಲಿ ದೇವದುರ್ಗದ ಮಾಜಿ ಎಪಿಎಂಸಿ ಅಧ್ಯಕ್ಷರಾದ ಆದನಗೌಡ ಪಾಟೀಲ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ತಾಲೂಕು ಸದಸ್ಯರಾದ ಭೀಮಣ್ಣ ವೀರಗೋಟ, ಸೈಯದ್ ಸಾಬ್, ವೀರಗೋಟ ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ಗ್ರಾಮದ ಮುಖಂಡರಾದ ದುರಗಪ್ಪ ಮತ್ತು ಸಿದ್ದಪ್ಪ ಸೇರಿದಂತೆ ಹಲವರು ಉಪಸ್ಥಿತ–ರಿದ್ದರು.ನೂತನ ಜಿಲ್ಲಾಧ್ಯಕ್ಷ ಕೆ. ಶಾಂತಪ್ಪ ಅವರಿಗೆ ಮುಖಂಡರು ಅಭಿನಂದನೆ ಸಲ್ಲಿಸಿ, ರಾಯಚೂರು ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷದ ಸಂಘಟನೆ ಮತ್ತಷ್ಟು ಬಲಗೊಳ್ಳಲಿ ಹಾಗೂ ಪಕ್ಷದ ಚಟುವಟಿ–ಕೆಗಳು ಪರಿಣಾಮಕಾರಿಯಾಗಿ ಮುಂದುವರಿಯಲಿ ಎಂದು ಶುಭ ಹಾರೈಸಿದರು.ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

ಕೋಮು ಗಲಭೆ ಸೃಷ್ಟಿಸುವುದೇ ಬಿಜೆಪಿಯವರ ಉದ್ದೇಶ...ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್

❑ ನೈಜ್ಯ ದೆಸೆ ನ್ಯೂಸ್



ತಾಂಡವಪುರ ಸೆಪ್ಟೆಂಬರ್ 20 ಮೈಸೂರು ಜಿಲ್ಲೆತಿ.ನರಸೀಪುರದಲ್ಲಿಗಣೇಶ ವಿಸರ್ಜನೆ ಆದರೂ ವಿವಾದ ನಿಲ್ಲುತ್ತಿಲ್ಲ.ಮೆರವಣಿಗೆಯಲ್ಲಿ ಮಾಜಿ ಸಂಸದ ಪ್ರತಾಪಸಿಂಹ ಸೇರಿ ಹಲವರು ಪ್ರಚೋದನಕಾರಿ ಭಾಷಣ ಮಾಡಿದ್ದಾರೆ. ಇವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಈಗಾಗಲೇ ಪೊಲೀಸ್ ಇಲಾಖೆಗೆ ದೂರು ನೀಡಲಾಗಿದ್ದು ಇವರ ಉದ್ದೇಶ ಶಾಂತಿ ನೆಮ್ಮದಿಯಿಂದ ಬದುಕುತ್ತಿರುವ ಜನರ ಮಧ್ಯೆ ಕೋಮು ಭಾವನೆ ಹುಟ್ಟು ಹಾಕಿ ಗಲಾಟೆ ಹಬ್ಬಿಸುವ ಪ್ರಯತ್ನ ಇವರದಾಗಿದ್ದು ಇವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಒತ್ತಾಯಿಸಲಾಗಿದೆ ಎಂದು ಸುದ್ದಿಗಾರರಿಗೆ ತಿಳಿಸಿದರುನಿಗದಿತ ಜನರಿಗಿಂತ ಅಧಿಕ ಜನರನ್ನ ಸೇರಿಸಿ ಮೆರವಣಿಗೆ ಮಾಡಲಾಗಿದೆ.300 ಜನರಿಗೆ ಅನುಮತಿ ಪಡೆದು 10 ಸಾವಿರ ಜನರನ್ನ ಸೇರಿಸಿದ್ದಾರೆ.ಚಿಕ್ಕಮಗಳೂರು,ಹಾಸನ, ಚಿಕ್ಕಬಳ್ಳಾಪುರ, ಮಂಗಳೂರಿನಿಂದ ಜನರು ಬಂದಿದ್ದಾರೆ.ಅವರ ಊರಿನಲ್ಲಿ ಗಣೇಶ ಮೆರವಣಿಗೆ ಮಾಡಲ್ವ?ಮೆರವಣಿಗೆ ಹಿಂದೆ ಕೋಮುಗಲಭೆ ಸೃಷ್ಟಿ ಮಾಡುವುದೇ ಇವರ ಉದ್ದೇಶ.ಇದೇ ತಂಡ ,ಮದ್ದೂರು, ನಾಗಮಂಗಲ ಹಾಗೂ ಬೇರೆಡೆ ಕೋಮುಗಲಭೆ ಹೊತ್ತಿಸಿದ್ರು. ಮೆರವಣಿಗೆಯಲ್ಲಿ ದಲಿತರ ಬಗ್ಗೆ ಮುಸ್ಲಿಂಮರ ಬಗ್ಗೆ ಅವಹೇಳನ ಭಾಷಣ ಮಾಡಿದ್ದಾರೆ.ಇವರು ಮೆರವಣಿಗೆ ಮಾಡಿದ್ದು ಗಣೇಶ ವಿಸರ್ಜನೆ ಮಾಡುವುದಕ್ಕಾ? ಅಥವಾ ಪ್ರಚೋದನಾ ಭಾಷಣ ಮಡುವುದಕ್ಕಾ?ಎಂದು ಕಾಂಗ್ರೆಸ್ ವಕ್ತಾರ ಲಕ್ಷ್ಮಣ್ ಹೇಳಿಕೆ ನೀಡಿದ್ದಾರೆ...ಈ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಗ್ರಾಮಂತರ ಅಧ್ಯಕ್ಷ ಬೀರಿಹುಂಡಿ ಬಸವಣ್ಣ ಮುಖಂಡ ಬಾಬು ಸೇರಿದಂತೆ ಯುವ ಮುಖಂಡರುಗಳು ಹಾಜರಿದ್ದರು

ಬಂಚಳ್ಳಿ ಹುಂಡಿ ಗ್ರಾಮದಲ್ಲಿ ಅದ್ದೂರಿ ಗಣೇಶೋತ್ಸವ ಕಪಿಲ ನದಿಯಲ್ಲಿ ವಿಸರ್ಜನೆ

❑ ನೈಜ್ಯ ದೆಸೆ ನ್ಯೂಸ್

ತಾಂಡವಪುರ ಸೆಪ್ಟೆಂಬರ್ 20 ಮೈಸೂರು ಜಿಲ್ಲೆ ನಂಜನಗೂಡು ತಾಲೂಕು ಚಿಕ್ಕಯನ ಛತ್ರ ಹೋಬಳಿ ವರುಣ ವಿಧಾನಸಭಾ ಕ್ಷೇತ್ರಕ್ಕೆ ಸುರುವ ಬಂಚಳ್ಳಿ ಹುಂಡಿ ಗ್ರಾಮದಲ್ಲಿ ಗ್ರಾಮಸ್ಥರು ಅದ್ದೂ–ರಿಯಾಗಿ ಗೌರಿ ಗಣೇಶ ಹಬ್ಬವನ್ನು ಆಚರಿಸಿ ಗಣೇಶ್ ಮೂರ್ತಿಯನ್ನು ಟ್ರಾಕ್ಟರ್ ನಲ್ಲಿ ಕೂರಿಸಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ಪಟಾಕಿ ಸಿಡಿಸಿ ಭಕ್ತಿ ಭಾವದಿಂದ ಪೂಜಿ ಸಲ್ಲಿಸಿ ಅದ್ದೂರಿಯಾಗಿ ಗಣೇಶ ಉತ್ಸವವನ್ನು ಆಚರಿಸಲಾಯಿತು ಗಣೇಶನ ಮೆರವಣಿಗೆ ಎಂದರೆ ಭಯ ಭೀತಿಯಿಂದ ಆಚರಿಸುವ ವಾತಾವರಣ ನಿರ್ಮಾಣವಾಗಿದೆ ಆದರೆ ಚಿಕ್ಕಯ್ಯನ ಛತ್ರ ಹೋಬಳಿ ವರುಣ ವಿಧಾನಸಭಾ ಕ್ಷೇತ್ರಕ್ಕೆ ಸೇರುವ ತಾಂಡವಪುರ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ



ಭಕ್ತಿ ಭಾವದಿಂದ ಶಾಂತಿಯುತವಾಗಿ ಸ್ನೇಹ ಸೌವಾದ ಹಿತವಾಗಿ ಗ್ರಾಮಸ್ಥರು ಗಣೇಶನ ಹಬ್ಬವನ್ನು ಹಾಗೂ ಮೆರವಣಿಗೆಯನ್ನು ಆಚರಿಸುತ್ತಿರುವುದು ವಿಶೇಷವಾಗಿತ್ತು ಮುನ್ನೆಚರಿಕೆ ಕ್ರಮವಾಗಿ ನಂಜನಗೂಡು ಗ್ರಾಮಾಂತರ ಪೊಲೀಸರು ಬಿಜಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಿ ಎಲ್ಲಿಯೂ ಎಲ್ಲಿಯೂ ಕೂಡ ಸಣ್ಣಪುಟ್ಟ ಗಲಾಟೆಯು ಸಹ ಆಗಬಾರದು ಗಣೇಶನ ಪೂಜೆಯನ್ನು ಭಕ್ತಿ ಭಾವದಿಂದ ಆಚರಿಸಿ ಕಪಿರಿ ನದಿಯಲ್ಲಿ ವಿಸರ್ಜನೆ ಮಾಡುವಂತೆ ಎಲ್ಲ ವ್ಯವಸ್ಥೆಯನ್ನು ಮಾಡಿ ಮುಂಜಾಗ್ತ ಕ್ರಮ ಕೈಗೊಂಡಿರುವುದು ಕಂಡು ಬಂತು ಗಣೇಶನ ಮೆರವಣಿಗೆಯಲ್ಲಿ ಗ್ರಾಮದ ಮುಖಂಡರಾದ ಕೆ ಮರಿಗೌಡ ಗುರು ಶಾಂತು ಬಿಕೆ ಬಸವರಾಜು ಹುಚ್ಚೇಗೌಡ ಮಹಾದೇವ ಹಾಗೂ ಗ್ರಾಮದ ವಿನಾಯಕ ಗೆಳೆಯರ ಬಳಗದ ಯುವಕರು ಮೆರವಣಿಗೆಯಲ್ಲಿ ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾದರು

ಮಕ್ಕಳಿಗೆ ಶಿಕ್ಷಣ ನೀಡುವ ಜೊತೆಗೆ ವ್ಯಕ್ತಿತ್ವ ರೂಪಿಸುವಲ್ಲಿ ಮದರಸಾಗಳ ಪಾತ್ರ ದೊಡ್ಡದು : ಸೈಯದ್ ಷಾ ಕಾಸೀಂ ಖಾದ್ರಿ ಸರ್ಕಾರ್ ಪಾಷಾ ಸಾಹೇಬ್ ಸಜ್ಜಾದೆ ನಸೀನ್

❑ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ: ಮಕ್ಕಳ ಶಿಕ್ಷಣ, ಧಾರ್ಮಿಕ, ನೈತಿಕ ಮೌಲ್ಯಗಳು ಹಾಗೂ ಉತ್ತಮ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಮದರಸಾಗಳ ಪಾತ್ರ ಮಹತ್ವದ್ದಾಗಿದೆ ಎಂದು ಬಿಜಾಪುರದ ಮುಸ್ಲಿಂ ಧರ್ಮಗುರು ಸೈಯದ್ ಷಾ ಕಾಸೀಂ ಖಾದ್ರಿ ಸರ್ಕಾರ್ ಪಾಷಾ ಸಾಹೇಬ್ ಸಜ್ಜಾದೆ ನಸೀನ್ ಹೇಳಿದರು. ಪಟ್ಟಣದ 8ನೇ ವಾರ್ಡಿನ ಯಾಸೀನ್ ಕಾಲೋನಿಯಲ್ಲಿ ಖಾದ್ರಿಯಾ ಎಜ್ಯೂಕೇಷನ್ ಸೋಷಿಯಲ್ ಮತ್ತು ವೆಲ್ ಫೇರ್ ಟ್ರಸ್ಟ ಖಾನ್ಖಾಹೆ ಖಾದ್ರಿಯಾ ಮದರಸ–ಎ–ಅರಬಿಯಾ ಫೈಝಾನೆ ಖಾದ್ರಿಯಾ ಉದ್ಘಾಟಿಸಿ ದಿವ್ಯಸಾನಿಧ್ಯವಹಿಸಿ ಮಾತನಾಡಿ, ಮದರಸಗಳೆಂದರೆ ಒಂದು ಮಗು ತನ್ನ ದೈನಂದಿನ ಕೈಂಕರ್ಯಗಳನ್ನು ತಿಳಿದುಕೊಂಡು, ಶಿಕ್ಷಣದ ಜೊತೆಗೆ ಸಂಸ್ಕಾರ, ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಬೆಳೆಯುವ ಕೇಂದ್ರವಾಗಿದೆ.



ಮದರಸಗಳು ಎಂದೆಂದಿಗೂ ಅದೊಂದು ತೆರದ ಪುಸ್ತಕವಾಗಿದ್ದು, ಯಾರು ಯಾವಾಗ ಬೇಕಾದರೂ ಅಲ್ಲಿಗೆ ಸಂದರ್ಶಿಸಬಹುದಾಗಿದೆ. ಮದರಸಗಳು ದೇಶದ ಭವಿಷ್ಯ ರೂಪಿಸುವಲ್ಲಿ ತನ್ನದೇ ಆದ ಕೊಡುಗೆಗಳನ್ನು ನೀಡುತ್ತಿಲೇ ಇವೆ ಎಂದರು. ಧರ್ಮಗುರುಗಳಾದ ಸೈಯದ್ ಷಾ ಮೈಮೂಬ್ ಖಾದ್ರಿ ರೈಸ್ ಸಾಹೇಬ್ ಸಜ್ಜಾದೆ ನಸೀನ್ ದರ್ಗಾ ಹಟ್ಟಿ ಕಂಪ್ಲಿ, ಸೈಯದ್ ಷಾ ಅಬುಲ್ ಹಸನ್ ಖಾದ್ರಿ ಆಜಾಮ್ ಪಾಷಾ ಸಾಹೇಬ್ ದಿವಾನೆ ಖಾದ್ರಿ ಕಂಪ್ಲಿ. ಸೈಯದ್ ಷಾ ಆದೀಲ್ ಪಾಷಾ ಸಾಹೇಬ್ ಸಜ್ಜಾದೆ ನಸೀನ್ ಚಿಕ್ಕಜಂತಕಲ್, ಸೈಯದ್ ಷಾ ಅಬು ತುರಾಬ್ ಖಾದ್ರಿ ಉರುಫ್ ಲೈಕ್ ಸಾಹೇಬ್ ಜಾ ನಶೀನ್ ದರ್ಗಾ ಹಟ್ಟಿ ದಿವಾನ ಖಾನಾ ಕಂಪ್ಲಿ ಇವರು ಕಾರ್ಯಕ್ರಮದ ದಿವ್ಯಸಾನಿಧ್ಯವಹಿಸಿದ್ದರು. ಮಹಮ್ಮದ್ ಪೈಗಂಬರ್ ಆಸಾರ್ ಮುಬಾರಕ್ ಮತ್ತು ತಬರುಕಾಕ್ ಗೆ ಮುಸ್ಲಿಂ ಸಮಾಜದ ಮುಖಂಡರು, ಮಹಿಳೆಯರು, ಮಕ್ಕಳು ಭೇಟಿ ನೀಡಿ, ದರ್ಶನ ಪಡೆದರು.ಈ ಸಂದರ್ಭದಲ್ಲಿ ಮುಖಂಡರಾದ ಟಿ.ಮೆಹಬೂಬ್ ಸಾಹೇಬ್, ಮೆಹಬೂಬ್ ಸಾಹೇಬ್ ಗಿಲ್ವರ್ಕ್, ಎನ್.ಯುನೂಸ್, ಕರಡಿ ವಲಿಸಾಬ್, ಅಬ್ದುಲ್ ಸಾಬ್, ಮುನೀರ್ ಸಾಬ್, ಗೌಸ್ ಸಾಬ್, ರಫೀಕ್ ಸಾಬ್, ಅನೀಫ್ ಸಾಬ್, ಗಬ್ಬರ್ ಸಾಬ್ ಸೇರಿದಂತೆ ಮುಸ್ಲಿಂ ಸಮಾಜದವರು ಪಾಲ್ಗೊಂಡಿದ್ದರು. ನಂತರ ಅನ್ನ ಸಂತಾರ್ಪಣೆ ಕಲ್ಪಿಸಲಾಗಿತ್ತು.ವರದಿ : ಜಿಲಾನಸಾಬ್ ಬಡಿಗೇರ್

ಕರ್ನಾಟಕ ರಾಜ್ಯ ಸುರಕ್ಷಾ ಶ್ರಮಿಕ ವರ್ಗ ಕಟ್ಟಡ ನಿರ್ಮಾಣ ಮತ್ತು ಅಸಂಘಟಿತ ಕಾರ್ಮಿಕರ ಸಂಘ ನೂತನ ಪದಾಧಿಕಾರಿಗಳ ರಚನೆ

ರಾಜ್ಯಾಧ್ಯಕ್ಷರ ನಿರ್ದೇಶನದ ಮೇರೆಗೆ ಮಾನ್ವಿ–ಸಿರವಾರ ತಾಲೂಕು ಸಮಿತಿಗಳ ಆಯ್ಕೆ

❑ ನೈಜ್ಯ ದೆಸೆ ನ್ಯೂಸ್

ಮಾನ್ವಿ:* ಕಟ್ಟಡ ನಿರ್ಮಾಣ ಹಾಗೂ ಅಸಂಘಟಿ–ತ ಕಾರ್ಮಿಕರ ಸಮಸ್ಯೆಗಳಿಗೆ ಪರಿಣಾಮಕಾರಿ ಧ್ವನಿಯಾಗುವ ಉದ್ದೇಶದಿಂದ ಕರ್ನಾಟಕ ರಾಜ್ಯ ಸುರಕ್ಷಾ ಶ್ರಮಿಕ ವರ್ಗ ಕಟ್ಟಡ ನಿರ್ಮಾಣ ಮತ್ತು ಅಸಂಘಟಿತ ಕಾರ್ಮಿಕರ ಸಂಘದ ತಾಲೂಕು ಮಟ್ಟದ ನೂತನ ಪದಾಧಿಕಾ–ರಿಗಳನ್ನು ರಾಜ್ಯಾಧ್ಯಕ್ಷರ ನಿರ್ದೇಶನ ಹಾಗೂ ಮಾರ್ಗದರ್ಶನದ ಮೇರೆಗೆ ರಚಿಸಲಾಗಿದೆ. ಕಾರ್ಮಿಕರ ಹಕ್ಕುಗಳು, ಉದ್ಯೋಗದ ಭದ್ರತೆ, ಸರ್ಕಾರದ ವಿವಿಧ ಕಾರ್ಮಿಕ ಕಲ್ಯಾಣ ಯೋಜನೆಗಳು ಹಾಗೂ ಸೌಲಭ್ಯಗಳು ಅರ್ಹ ಫಲಾನುಭವಿಗಳಿಗೆ ತಲುಪುವಂತೆ ಮಾಡುವ ನಿಟ್ಟಿನಲ್ಲಿ ಸಂಘಟನೆಯ ಮೂಲಕ ನಿರಂತರವಾಗಿ ಕಾರ್ಯನಿರ್ವಹಿಸುವ ಉದ್ದೇಶ ಹೊಂದಲಾಗಿದೆ. ಕಾರ್ಮಿಕರ ಸಮಸ್ಯೆಗಳನ್ನು ಅಧಿಕಾರಿಗಳ ಗಮನಕ್ಕೆ ತಂದು, ಅಗತ್ಯವಿದ್ದಲ್ಲಿ ಕಾನೂನುಬದ್ಧವಾಗಿ ಹೋರಾಟ ನಡೆಸುವ ಮೂಲಕ ಪರಿಹಾರ ಕಂಡುಕೊಳ್ಳಲು ಸಂಘಟನೆ ಮುಂದಾಗಲಿದೆ ಎಂದು ತಿಳಿಸಲಾಗಿದೆ .ಮಾನ್ವಿ ತಾಲೂಕು ಸಮಿತಿಗೆ ತಾಲೂಕಾಧ್ಯಕ್ಷರಾಗಿ ಸದಾಶಿವಬ್ಯಾಗವಾಟ್,



ಉಪಾಧ್ಯಕ್ಷರಾಗಿ ತಿಮ್ಮಣ್ಣ ನಕ್ಕುಂದಿ ಖಜಾಂಚಿಂ–ಯಾಗಿ ಮೌನೇಶ್ ಬ್ಯಾಗವಾಟ್, ತಾಲೂಕು ಸಹ ಕಾರ್ಯದರ್ಶಿಯಾಗಿ ಮಂಜುನಾಥ್ ನಕಾಶಿ ಬ್ಯಾಗವಾಟ್, ತಾಲೂಕು ಕಾರ್ಯದರ್ಶಿಯಾಗಿ ಶಿವರಾಜ್ ಕೆ. ಕರೆಗುಡ್ಡ, ತಾಲೂಕು ಕಾರ್ಯಕಾರಿ ಸದಸ್ಯರಾಗಿ ಸೋಮಶೇಖರ್ ಬ್ಯಾಗವಾಟ್ ಹಾಗೂ ಶಿವರಾಜ್ ಬಿ. ಬ್ಯಾಗವಾಟ್. ಪ್ರಧಾನ ಕಾರ್ಯದರ್ಶಿ ದೇವಪ್ಪ ಬ್ಯಾಗವಾಟ್ ಕಾರ್ಯದರ್ಶಿ ಮುದುಕಪ್ಪ , ಸಂಘಟನಾ ಸಹ ಕಾರ್ಯದರ್ಶಿ ನಾಗರಾಜ್ ಬಳ್ಳಾರಿ ಇವರನ್ನು ಆಯ್ಕೆ ಮಾಡಲಾಗಿದೆ.ಸಿರವಾರ ತಾಲೂಕು ಸಮಿತಿಗೆ ತಾಲೂಕಾಧ್ಯಕ್ಷರಾಗಿ ಮುದುಗಲ್ ಭಾಷಾ, ಉಪಾಧ್ಯಕ್ಷರಾಗಿ ಯಮನಪ್ಪ ಮಾಡಗಿರಿ, ತಾಲೂಕು ಸಹ ಕಾರ್ಯದರ್ಶಿಯಾಗಿ ರಾಜಸಾಬ್ ಮಾಡಗಿರಿ, ತಾಲೂಕು ಕಾರ್ಯದರ್ಶಿಯಾಗಿ ನಾಗರಾಜ ಮಾಡಗಿರಿ, ಸಂಘಟನಾ ಕಾರ್ಯದರ್ಶಿಯಾಗಿ ಸಿದ್ದಣ್ಣ ಮಾಡಗಿರಿ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಶಿವ ಮಾಡಗಿರಿ ಅವರು ರಾಜ್ಯಾಧ್ಯಕ್ಷರಾದ ಪರಶುರಾಮ ಬಾಗಲವಾಡ ಮತ್ತು ರಾಜ್ಯ ಪ್ರಧಾನ ಕಾರ್ಯದರ್ಶಿ ಬಸವರಾಜ ನಕ್ಕುಂದಿ ಆಯ್ಕೆ ಮಾಡಿದರು.ನೂತನ ಪದಾಧಿಕಾರಿಗಳ ರಚನೆಯಿಂದ ತಾಲೂಕು ಮಟ್ಟದಲ್ಲಿ ಕಾರ್ಮಿಕ ಸಂಘಟನೆಯ ಚಟುವಟಿ–ಕೆಗಳು ಮತ್ತಷ್ಟು ಚುರುಕುಗೊಳ್ಳುವ ನಿರೀಕ್ಷೆ ವ್ಯಕ್ತವಾಗಿದೆ. ಕಟ್ಟಡ ನಿರ್ಮಾಣ ಕಾರ್ಮಿಕರು ಹಾಗೂ ಅಸಂಘಟಿತ ವಲಯದ ಕಾರ್ಮಿಕರು ಎದುರಿಸುತ್ತಿರುವ ವೇತನ, ಸುರಕ್ಷತೆ, ಕಲ್ಯಾಣ ಸೌಲಭ್ಯಗಳು ಸೇರಿದಂತೆ ವಿವಿಧ ಸಮಸ್ಯೆಗಳನ್ನು ಗುರುತಿಸಿ, ಅವುಗಳ ಪರಿಹಾರಕ್ಕಾಗಿ ಸಂಬಂಧಿಸಿದ ಇಲಾಖೆಗಳೊಂದಿಗೆ ನಿರಂತರವಾಗಿ ಸಂಪರ್ಕ ಸಾಧಿಸುವ ಜವಾಬ್ದಾರಿಯನ್ನು ನೂತನ ಸಮಿತಿಗಳು ವಹಿಸಲಿವೆ.ಕಾರ್ಮಿಕರ ಹಕ್ಕುಗಳಿಗಾಗಿ ಧ್ವನಿ ಎತ್ತುವುದು, ಶೋಷಣೆ ಹಾಗೂ ಅನ್ಯಾಯದ ವಿರುದ್ಧ ಕಾನೂನುಬದ್ಧವಾಗಿ ಪ್ರಶ್ನಿಸುವುದು ಮತ್ತು ಕಾರ್ಮಿಕ ವರ್ಗದ ಹಿತಾಸಕ್ತಿಯನ್ನು ಕಾಪಾಡುವುದು ಸಂಘಟನೆಯ ಪ್ರಮುಖ ಉದ್ದೇಶವಾಗಿದೆ ಎಂದು ಸಂಘದ ರಾಜ್ಯಾಧ್ಯಕ್ಷರಾದ ಪರಶುರಾಮ್ ಬಾಗಲವಾಡ ಮತ್ತು ಬಸವರಾಜ ನಕ್ಕುಂದಿ ತಿಳಿಸಿದ್ದಾರೆ.

ಪ್ರಜಾಸೇವೆ ಆಂದೋಲನ.2026 -23 ಅಹವಾಲು ಸ್ವೀಕಾರ

❑ ನೈಜ್ಯ ದೆಸೆ ನ್ಯೂಸ್

ಕವಿತಾಳ ಸಿರವಾರ ತಹಸೀಲ್ದಾರ್ ಅಶೋಕ ಪವಾರ ನೇತೃತ್ವದಲ್ಲಿ ನಡೆದ ಪ್ರಜಾ ಆಂದೋಲನ.2026 ದಲ್ಲಿ ವಿವಿಧ ಇಲಾಖೆಯ ಒಟ್ಟು 23 ಅಹವಾಲುಗಳನ್ನು ಸ್ವೀಕ–ರಿಸಲಾಯಿತು.ತಹಸೀಲ್ದಾರ್ ಮಾತನಾಡಿ ಸರ್ಕಾರದ ವಿವಿಧ ಯೋಜನೆಗಳನ್ನು ಜನರ ಬಳಿಗೆ ತಲುಪಿಸುವುದು ಹಾಗೂ ಜನತೆಯ ಕುಂದುಕೊರತೆಗಳನ್ನು ಸ್ಥಳದಲ್ಲಿಯೇ ಆಲಿಸಿ ಪರಿಹಾರ ಕಲ್ಪಿಸುವ ಉದ್ದೇಶದಿಂದ ಸರ್ಕಾರ ಈ ಪ್ರಜಾ ಆಂದೋಲನಾ ಕಾರ್ಯಕ್ರಮವನ್ನು ಜಾರಿಗೆ ತಂದಿದೆ ಆದ್ದರಿಂದ ಸಾರ್ವಜನಿಕರು ಸಕ್ರೀಯವಾಗಿ ಪಾಲ್ಗೋಂಡು ಇದರ ಸಧುಪಯೋಗವನ್ನು ಪಡೆಯುವಂತೆ ಹೇಳಿದರು. 'ಸಿರವಾರ ತಾಲ್ಲೂಕಿನಲ್ಲಿ ತಾಂತ್ರಿಕ ದೋಷಗಳಿಂದಾಗಿ ಪಿಂಚಣಿ ಸರಿಯಾಗಿ ತಲುಪುತ್ತಿಲ್ಲದಿರುವ ಕು–ರಿತು ವಿವರಿಸುತ್ತಾ, ರಾಜ್ಯದಲ್ಲಿ ಒಟ್ಟು 23 ಲಕ್ಷ ಮಾಶಾಸನಗಳನ್ನು ತಡೆಹಿಡಿಯಲಾಗಿದೆ ಕಾರಣ ಜಿಎಸ್‌ಟಿ ಪಾವತಿಸುವವರು, ಎಪಿಎಲ್ ಕಾರ್ಡು ಹೊಂದಿರುವವರು, ವಾರ್ಷಿಕ ಆದಾಯ ಒಂದು ಲಕ್ಷ ಇಪ್ಪತ್ತು ಸಾವಿರಕ್ಕಿಂತ ಹೆಚ್ಚಿರುವವರು ಹಾಗೂ ಅರ್ಹ ವಯಸ್ಸಿಗಿಂತ ಕಡಿಮೆ ಹೊಂದಿರುವವರು ಹೀಗೆ ಹಲವಾರು ಕಾರಣಗಳಿಂದ



ತಡೆಹಿಡಿಯಲಾಗಿದೆ ಸರ್ಕಾರದ ಆದೇಶದ ಪ್ರಕಾರ ಇಡೀ ರಾಜ್ಯದಲ್ಲಿ ಮಾಶಾಸನಗಳ ದಾಖಲೆಗಳನ್ನು ಮತ್ತೊಮ್ಮೆ ಪರಿಶೀಲಿಸಿ ಅರ್ಹ ಫಲಾನುಭವಿಗಳಿಗೆ ಬರುವಂತೆ ಮಾಡಲಾಗುವುದಾಗಿ' ತಿಳಿಸಿದರು. ಒಟ್ಟು ಕಂದಾಯ ಇಲಾಖೆಗೆ 12, ತಾಲ್ಲೂಕು ಪಂಚಾಯತಿಗೆ 1, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ 1, ಕೃಷಿ ಇಲಾಖೆಗೆ 2, ನೀರಾವರಿ ಇಲಾಖೆಗೆ 2,ಪಟ್ಟಣ ಪಂಚಾಯತಿಗೆ 1,ಗ್ರಾಮ ಪಂಚಾಯತ್ ಹಿರೇಹಣಗಿಗೆ 1,ಸಾರಿಗೆ ಇಲಾಕೆಗೆ 1 ಸೇರಿದಂತೆ 23 ಸಮಸ್ಯೆಗಳ ಅಹವಾಲು ಬಂದಿದ್ದು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಶೀಘ್ರವೇ ಪರಿಹಾರಕ್ಕಾಗಿ ಜಿಲ್ಲಾಧಿಕಾರಿಗಳಿಗೆ ಮಾಹಿತಿ ಸಲ್ಲಿಸಲಾಗುವುದಾಗಿ ತಿಳಿಸಿದರು.ಈ ಸಂಧರ್ಭದಲ್ಲಿ ಕೃಷಿ ಇಲಾಕೆಯ ಶಿವಶರಣ ಬೋವಿ, ತಾ.ಪಂ.ಇಓ ಮಂಜುನಾಥ, ಸಮುದಾಯ ಆರೋಗ್ಯ ಕೇಂದ್ರದ ವೈದ್ಯರಾದ .ಡಾ. ಪ್ರವೀಣಕುಮಾರ್, ಕಂದಾಯ ಇಲಾಖೆಯ ಉಪ ತಸೀಲ್ದಾರ್ ಮಂಜುನಾಥ, ಗ್ರಾಮ ಆಢಳಿತಾಧಿಕಾರಿಗಳಾದ ಸದಾಕಲಿ, ಚಾಂಮುಂಡಿಶ್ವರಿ , ಅನೀಲ್, ಉಮೇಶ, ಸೇ–ರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಅಂಗನವಾಡಿ ಕಾರ್ಯಕರ್ತೆಯರು ಉಪಸ್ಥಿತ–ರಿದ್ದರು.ಈ ಪ್ರಮುಖ ಕಾರ್ಯಕ್ರಮಕ್ಕೆ ಶಿಕ್ಷಣ ಇಲಾಖೆ, ಪಿಆರ್‌ಡಿ, ಪಿ.ಡಬ್ಲೂ.[illegible]ಡಿ ಇಲಾಖೆಯ ಅಧಿಕಾರಿಗಳು ಗೈರು ಹಾಜರಾಗಿರುವುದು ಸಾರ್ವಜನಿಕರ ಅಸಮಧಾನಕ್ಕೆ ಕಾರಣವಾಯಿತು.

ನೇಮಕಾತಿ ಪ್ರಕಟಣೆ

KEA ನೇಮಕಾತಿ 2026 – 210 ಗ್ರೂಪ್–ಸಿ (ನೀರು ಸರಬರಾಜು ನಿರ್ವಾಹಕ, ಎಲೆಕ್ಟ್ರಿಷಿಯನ್) ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ 12, 2026KEA ನೇಮಕಾತಿ 2026: 210 ಗ್ರೂಪ್–ಸಿ (ನೀರು ಸರಬರಾಜು ನಿರ್ವಾಹಕ, ಎಲೆಕ್ಟ್ರಿಷಿಯನ್) ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (KEA) ಸೆಪ್ಟೆಂಬರ್ 2026ರ ಅಧಿಕೃತ ಅಧಿಸೂಚನೆಯ ಮೂಲಕ ಗ್ರೂಪ್–ಸಿ (ನೀರು ಸರಬರಾಜು ನಿರ್ವಾಹಕ, ಎಲೆಕ್ಟ್ರಿಷಿಯನ್) ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕ ಸರ್ಕಾರದಲ್ಲಿ ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 30–ಸೆಪ್ಟೆಂಬರ್–2026 ರೊಳಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: cetonline.karnataka.gov.in

ವಟಗಲ್‌ನಲ್ಲಿ ಕೆಎಸ್‌ಆರ್‌ಪಿ ಬೆಟಾಲಿಯನ್‌ಗೆ 50 ಎಕರೆ

ಮಸ್ಕಿ ತಾಲ್ಲೂಕಿನ ಅಭಿವೃದ್ಧಿಗೆ ಮತ್ತಷ್ಟು ಬಲ: ಬಸನಗೌಡ ತುರ್ವಿಹಾಳ

ನೈಜ್ಯ ದೆಸೆ ನ್ಯೂಸ್

ಮಸ್ಕಿ: ತಾಲ್ಲೂಕಿನ ವಟಗಲ್ ಗ್ರಾಮದಲ್ಲಿ ಕರ್ನಾಟಕ ರಾಜ್ಯ ಮೀಸಲು ಪೊಲೀಸ್ (ಕೆಎಸ್‌ಆರ್‌ಪಿ) ಬೆಟಾಲಿಯನ್ ಸ್ಥಾಪನೆಗೆ ರಾಜ್ಯ ಸಚಿವ ಸಂಪುಟ ಒಪ್ಪಿಗೆ ನೀಡಿರುವುದು ಸಂತಸದ ಸಂಗತಿ. ಇದಕ್ಕಾಗಿ 50 ಎಕರೆ ಗೋಮಾಳ ಜಮೀನು ನಿಗದಿಪಡಿಸಿರುವುದು ಮಸ್ಕಿ ತಾಲ್ಲೂಕಿನ ಅಭಿವೃದ್ಧಿಗೆ ಮತ್ತಷ್ಟು ಬಲ ನೀಡಲಿದೆ ಎಂದು ಖಾದಿ ಗ್ರಾಮೋದ್ಯೋಗ




ನಿಗಮದ ಅಧ್ಯಕ್ಷ ಶಾಸಕ ಆರ್. ಬಸನಗೌಡ ತುರ್ವಿಹಾಳ ಹೇಳಿದ್ದಾರೆ.ಮಾಧ್ಯಮ ಹೇಳಿಕೆ ನೀಡಿರುವ ಅವರು, ರಾಯಚೂರು ಜಿಲ್ಲೆಯಲ್ಲಿ ಕೆಎಸ್‌ಆರ್‌ಪಿ ಬೆಟಾಲಿಯನ್ ಸ್ಥಾಪಿಸುವ ಕುರಿತು ವಿಧಾನಸಭೆಯ ಪ್ರಶ್ನೋತ್ತರ ಅವಧಿಯಲ್ಲಿ ಸರ್ಕಾರದ ಗಮನ ಸೆಳೆಯಲಾಗಿತ್ತು. ಆಗ ಗೃಹ ಸಚಿವ ಡಾ.ಜಿ. ಪರಮೇಶ್ವರ ಅವರು ಆರ್ಥಿಕ ಇಲಾಖೆಯ ಅನುಮೋದನೆ ಪಡೆದು ಅಗತ್ಯ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದರು ಎಂದು ತಿಳಿಸಿದ್ದಾರೆ.ಇದೀಗ ಸಚಿವ ಸಂಪುಟ ಅನುಮೋದನೆ ನೀಡಿದ್ದು, ವಟಗಲ್ ಗ್ರಾಮದಲ್ಲಿ 50 ಎಕರೆ ಗೋಮಾಳ ಜಮೀನನ್ನು ಬೆಟಾಲಿಯನ್ ಸ್ಥಾಪನೆಗೆ ನಿಗದಿಪಡಿಸಲಾಗಿದೆ. ಈ ಯೋಜನೆ ಜಾರಿಯಿಂದ ಮಸ್ಕಿ ತಾಲ್ಲೂಕಿನ ಅಭಿವೃದ್ಧಿಗೆ ಮತ್ತಷ್ಟು ವೇಗ ದೊರೆಯಲಿದೆ. ಇದು ತಾಲ್ಲೂಕಿನ ಕಿರೀಟಕ್ಕೆ ಮತ್ತೊಂದು ಗರಿ ಎಂದು ಹೇಳಿದ್ದಾರೆ.ಯೋಜನೆ ಅನುಷ್ಠಾನಕ್ಕೆ ಸಹಕರಿಸಿದ ರಾಜ್ಯ ಸರ್ಕಾರ ಹಾಗೂ ಗೃಹ ಇಲಾಖೆಗೆ ಕೃತಜ್ಞತೆ ಸಲ್ಲಿಸುವುದಾಗಿ ಶಾಸಕ ಬಸನಗೌಡ ತುರ್ವಿಹಾಳ ತಿಳಿಸಿದ್ದಾರೆ.



ಕೆ. ಶಾಂತಪ್ಪ ಅವರಿಗೆ ಶುಭ ಹಾರೈಸಿದ ಶಾಸಕ ಹಂಪನಗೌಡ ಬಾದರ್ಲಿ

ನೈಜ್ಯ ದೆಸೆ ನ್ಯೂಸ್







ರಾಯಚೂರು: ರಾಯಚೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ನೂತನ ಅಧ್ಯಕ್ಷರಾಗಿ ಶ್ರೀ ಕೆ. ಶಾಂತಪ್ಪ ಅವರು ಪದಗ್ರಹಣ ಸ್ವೀಕರಿಸಿದ ಹಿನ್ನೆಲೆಯಲ್ಲಿ ನಗರದಲ್ಲಿ ನಡೆದ ಪದಗ್ರಹಣ ಸಮಾರಂಭದಲ್ಲಿ ಸಿಂಧನೂರು ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಹಂಪನಗೌಡ ಬಾದರ್ಲಿ ಅವರು ಭಾಗವಹಿಸಿ, ನೂತನ ಜಿಲ್ಲಾಧ್ಯಕ್ಷರಿಗೆ ಆತ್ಮೀಯವಾಗಿ ಶುಭ ಹಾರೈಸಿದರು.ರಾಯಚೂರಿನಲ್ಲಿ ಆಯೋಜಿಸಲಾಗಿದ್ದ ಪದಗ್ರಹಣ ಸಮಾರಂಭದಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರು, ಜನಪ್ರತಿನಿಧಿಗಳು, ಕಾರ್ಯಕರ್ತರು ಹಾಗೂ ಅಭಿಮಾನಿಗಳ ಸಮ್ಮುಖದಲ್ಲಿ ಶ್ರೀ ಕೆ. ಶಾಂತಪ್ಪ ಅವರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಅಧಿಕೃತವಾಗಿ ಜವಾಬ್ದಾರಿ ವಹಿಸಿಕೊಂಡರು. ಈ ಸಂದರ್ಭದಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಶಾಸಕ ಹಂಪನಗೌಡ ಬಾದರ್ಲಿ ಅವರು ನೂತನ ಜಿಲ್ಲಾಧ್ಯಕ್ಷರಿಗೆ ಅಭಿನಂದನೆ ಸಲ್ಲಿಸಿ, ಅವರ ಮುಂದಿನ ಕಾರ್ಯಚಟುವಟಿಕೆಗಳಿಗೆ ಶುಭ ಹಾರೈಸಿದರು.ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಹಂಪನಗೌಡ ಬಾದರ್ಲಿ ಅವರು, ರಾಯಚೂರು ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷದ ಸಂಘಟನೆ ಇನ್ನಷ್ಟು ಪರಿಣಾಮಕಾರಿಯಾಗಿ ಹಾಗೂ ಬಲಿಷ್ಠವಾಗಿ ಬೆಳೆಯಬೇಕಿದೆ. ಪಕ್ಷದ ತತ್ವ, ಸಿದ್ಧಾಂತ ಹಾಗೂ ಜನಪರ ಕಾರ್ಯಕ್ರಮಗಳನ್ನು ಪ್ರತಿಯೊಬ್ಬ ಕಾರ್ಯಕರ್ತರು ಜನರಿಗೆ ತಲುಪಿಸುವ ಮೂಲಕ ಸಂಘಟನೆಯನ್ನು ತಳಮಟ್ಟದಿಂದ ಮತ್ತಷ್ಟು ಸದೃಢಗೊಳಿಸಬೇಕು ಎಂದು ಆಶಿಸಿದರು. ಜಿಲ್ಲೆಯ ಪ್ರತಿಯೊಂದು ಕ್ಷೇತ್ರದಲ್ಲಿಯೂ ಪಕ್ಷದ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಎಲ್ಲರನ್ನು ಒಗ್ಗೂಡಿಸಿಕೊಂಡು ಪಕ್ಷದ ಸಂಘಟನೆಗೆ ಹೊಸ ಚೈತನ್ಯ ನೀಡುವ ನಿಟ್ಟಿನಲ್ಲಿ ನೂತನ ಜಿಲ್ಲಾಧ್ಯಕ್ಷರಾದ ಕೆ. ಶಾಂತಪ್ಪ ಅವರು ಕಾರ್ಯನಿರ್ವಹಿಸಲಿ ಎಂದು ಅವರು ಶುಭ ಹಾರೈಸಿದರು.ಕಾಂಗ್ರೆಸ್ ಪಕ್ಷವು ಸದಾ ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸುವ ಹಾಗೂ ಜನರ ಪರವಾಗಿ ಧ್ವನಿಯಾಗುವ ಪಕ್ಷವಾಗಿದ್ದು, ಜಿಲ್ಲೆಯ ಅಭಿವೃದ್ಧಿ, ಜನರ ಕಲ್ಯಾಣ ಮತ್ತು ಸಾಮಾಜಿಕ ನ್ಯಾಯದ ಆಶಯಗಳನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಮುನ್ನಡೆಸುವಲ್ಲಿ ಪಕ್ಷದ ಸಂಘಟನೆ ಪ್ರಮುಖ ಪಾತ್ರ ವಹಿಸುತ್ತದೆ. ಈ ನಿಟ್ಟಿನಲ್ಲಿ ನೂತನ ಜಿಲ್ಲಾಧ್ಯಕ್ಷರ ನೇತೃತ್ವದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯು ಇನ್ನಷ್ಟು ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸಲಿ ಎಂಬ ಆಶಯವನ್ನು ವ್ಯಕ್ತಪಡಿಸಿದರು.ಶ್ರೀ ಕೆ. ಶಾಂತಪ್ಪ ಅವರು ಪಕ್ಷದ ಹಿರಿಯರು, ಮುಖಂಡರು ಹಾಗೂ ಕಾರ್ಯಕರ್ತರ ಸಹಕಾರದೊಂದಿಗೆ ಜಿಲ್ಲೆಯಲ್ಲಿ ಕಾಂಗ್ರೆಸ್ ಸಂಘಟನೆಯನ್ನು ಮತ್ತಷ್ಟು ಬಲಪಡಿಸುವ ಮೂಲಕ ಪಕ್ಷದ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಮುನ್ನಡೆಸಲಿ. ಅವರ ನೇತೃತ್ವದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯು ಜನಪರವಾಗಿ ಕಾರ್ಯನಿರ್ವಹಿಸಿ, ಜನರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಸಂಘಟನೆಗೆ ಮತ್ತಷ್ಟು ಬಲ ತುಂಬಲಿ ಎಂದು ಶಾಸಕ ಹಂಪನಗೌಡ ಬಾದರ್ಲಿ ಅವರು ಹಾರೈಸಿದರು.ನೂತನ ಜಿಲ್ಲಾಧ್ಯಕ್ಷರ ಪದಗ್ರಹಣ ಸಮಾರಂಭವು ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರಲ್ಲಿ ಉತ್ಸಾಹ ಮೂಡಿಸಿತು. ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ್ದ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಶ್ರೀ ಕೆ. ಶಾಂತಪ್ಪ ಅವರಿಗೆ ಅಭಿನಂದನೆ ಸಲ್ಲಿಸಿ, ಅವರ ಯಶಸ್ವಿ ಕಾರ್ಯಾವಧಿಗೆ ಶುಭಕೋರಿದರು.ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ವಿವಿಧ ಮುಖಂಡರು, ಜನಪ್ರತಿನಿಧಿಗಳು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ವಿವಿಧ ಘಟಕಗಳ ಪದಾಧಿಕಾರಿಗಳು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಉಪಸ್ಥಿತರಿದ್ದರು.

ವಚನ ದರ್ಶನ

ಎನ್ನ ಕಾಯವ ದಂಡಿಗೆಯ ಮಾಡಯ್ಯಾ ಎನ್ನ ಶಿರವ ಸೋರೆಯ ಮಾಡಯ್ಯಾ ಎನ್ನ ನರವ ತಂತಿಯ ಮಾಡಯ್ಯಾ, ಎನ್ನ ಬೆರಳ ಕಡ್ಡಿಯ ಮಾಡಯ್ಯಾ ಬತ್ತೀಸ ರಾಗವ ಹಾಡಯ್ಯಾ, ಉರದಲೊತ್ತಿ ಬಾರಿಸು,ಕೂಡಲಸಂಗಮದೇವಾ

12 ನೇ ಶತಮಾನದ ಶರಣರಾದ ವಿಶ್ವಗುರು ಬಸವಣ್ಣನವರ ಅತ್ಯಂತ ಪ್ರಸಿದ್ಧವಾದ ಹಾಗೂ ಸುಂದರವಾದ ವಚನವಾಗಿದೆ. ಈ ವಚನದಲ್ಲಿ ವಿಶ್ವಗುರು ಬಸವಣ್ಣನವರು ತಮ್ಮ ಸಂಪೂರ್ಣ ದೇಹವನ್ನು ದೇವರ ಸೇವೆಗೆ ಅರ್ಪಿಸಿಕೊಳ್ಳುವಂತೆ ಮತ್ತು ದೇವನೇ ಅದನ್ನು ನುಡಿಸುವಂತೆ ಬೇಡಿಕೊಂಡಿದ್ದಾರೆ.ಈ ವಚನದಲ್ಲಿ ಬಸವಣ್ಣನವರು ತಮ್ಮನ್ನು ತಾವು ದೇವರ ಕೈಯಲ್ಲಿರುವ 'ದಂಡಿಗೆ' ಇಂದಿನ ವೀಣೆಯಂತಹ ಒಂದು ತಂತಿ ವಾದ್ಯ ಮಾಡಲು ಕೇಳಿಕೊಳ್ಳುತ್ತಿದ್ದಾರೆ.ದೇಹ ಮತ್ತು ಶಿರ ನನ್ನ ದೇಹವನ್ನು ವಾದ್ಯದ ದಂಡವನ್ನಾಗಿಯೂ, ನನ್ನ ತಲೆಯನ್ನು ವಾದ್ಯಕ್ಕೆ ಬಳಸುವ ಒಣ–ಗಿದ ಸೋರೆಕಾಯಿಯ ಬುರುಡೆಯನ್ನಾಗಿಯೂ ಮಾಡು.ನರ ಮತ್ತು ಬೆರಳು: ನನ್ನ ದೇಹದ ನರಗಳನ್ನು ಆ ವಾದ್ಯದ ತಂತಿಗಳನ್ನಾಗಿ ಮಾಡು ಮತ್ತು ನನ್ನ ಬೆರಳುಗಳನ್ನೇ ಅದನ್ನು ನುಡಿಸುವ ಕಡ್ಡಿಯನ್ನಾಗಿ ಪರಿವರ್ತಿಸು.ಸಂಗೀತದ ನಾದ: ಹೇ ಕೂಡಲಸಂಗಮದೇವ, ನನ್ನನ್ನು ನಿನ್ನ ಎದೆಗೆ ಒತ್ತಿ ಹಿಡಿದು, ನಿನಗೆ ಇಷ್ಟ ಬಂದಂತೆ ಮೂವತ್ತೆರಡು ಬತ್ತೀಸ ರಾಗಗಳನ್ನು ಮಂಜುಳವಾಗಿ ನುಡಿಸು. ನನ್ನ ಜೀವನದ ಪ್ರತಿ ಕ್ಷಣವೂ ನಿನ್ನ ನಾದಮಯವಾಗಿರಲಿ ಎಂಬುದು ಇದರ ಆಶಯವಾಗಿದೆ.ಅಂದರೆ, "ನನ್ನಲ್ಲಿ ಯಾವುದೇ ಅಹಂಕಾರ ಉಳಿಯಬಾರದು, ನಾನು ಸಂಪೂರ್ಣವಾಗಿ ನಿನ್ನ ಇಚ್ಛೆಯಂತೆ ನಡೆಯುವ ನಿಮಿತ್ತ ಮಾತ್ರನಾಗಬೇಕು" ಎಂಬ ಪರಮ ಭಕ್ತಿಯ ಶರಣಾಗತಿಯ ಭಾವ ಇಲ್ಲಿದೆ. ಇಂಥಹ ವಚನಗಳು ಮನುಕುಲಕ್ಕೆ ದಾರಿದೀಪವಾಗಿವೆ. ನಾವು ನೀವು ವಚನದ ದಾರಿಯಲ್ಲಿ ಸಾಗೋಣ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ
ಅಂತರಗಂಗಿ–ಸಿಂಧನೂರು. 998094144

ಗದುಗಿನ ಪುಟ್ಟರಾಜ ಗುರುಜ್ಯೋತಿ

❑ ನೈಜ್ಯ ದೆಸೆ ನ್ಯೂಸ್



ಗದುಗಿನ ಪುಣ್ಯದ ಕರಕಮಲದಲಿ ಅರಳಿದ ಕಾವ್ಯದ ಕಸ್ತೂರಿ ।
ಪುಟ್ಟರಾಜ ಶರಣು ನೀನೆ ಸಂಗೀತದ ಚತುರಾನನ ಚತುರಿ ॥ ಪ॥

ಕಣ್ಣಿನ ಬೆಳಕು ಕಮರಿದರೇನು ಜ್ಞಾನದ ಕಣ್ಣನು ತೆರೆದವನೆ ।
ಹಾನಗಲ ಶಿವಯೋಗಿಯ ಪ್ರೀತಿಯ ವರಪುತ್ರನಾಗಿ ಬೆಳೆದವನೆ ।
ವೀರೇಶ್ವರ ಪುಣ್ಯಾಶ್ರಮದಲಿ ಕಲೆಯ ಸುಧೆಯನು ಹರಿಸಿದೆಯಾ ।
ಬಡವರ ಅಂಧರ ಬಾಳಿಗೆ ನೀನು ದೇವನ ಹರಕೆಯು ಆದೆಯಾ ॥ ॥1॥

ಷಟಸ್ಥಲ ಬ್ರಹ್ಮಜ್ಞಾನದ ಒಡಲಲಿ ಸಾಹಿತ್ಯದ ಸಿರಿ ಇಟ್ಟವನೆ ।
ಪುರಾಣ ಪ್ರವಚನ ನಾಟಕ ಕಥೆಗಳ ಅಮೃತ ಧಾರೆಯ ನೀಡಿದವನೆ ।
ಸಂಗೀತದ ನಾದದ ಲಹರಿಯಲಿ ಜಗವನೆ ಮರೆಸುವ ಗಂಧರ್ವ ।
ನಿನ್ನಯ ನಾಮದ ಸ್ಮರಣೆಯು ಸಾಕು ಅಳಿಸುವುದೀಗ ಈ ಗರ್ವ ॥ ॥2॥

ನಡೆದಾಡುವಾ ಕಲ್ಪವೃಕ್ಷವೇ ಕರುಣೆಯ ಕಡಲೇ ಗುರುದೇವ ।
ಕೋಟಿ ಕಂಠದ ಗಾಯನದಲ್ಲಿ ನಿನ್ನದೆ ಮೂರ್ತಿಯು ಶ್ರೀದೇವ ।
ಬೀರಪ್ಪ ಶಂಭೋಜಿಯ ಭಕ್ತಿಯಲಿ ನಿನ್ನಯ ಪಾದಕೆ ಶಿರಬಾಗಿ ।
ನೆಮ್ಮದಿ ನೀಡುತ ಹರಸು ನೀ ಗದುಗಿನ ಜ್ಞಾನದ ಮಹಾಯೋಗಿ ॥ ॥3॥

ಬೀರಪ್ಪ ಶಂಭೋಜಿ, ಸಿಂಧನೂರು

ಮಹಿಮೂದಾ ಮೆಮೋರಿಯಲ್ ಎಜ್ಯುಕೇಶನಲ್ & ರೂರಲ್ ವೆಲ್ ಫೇರ್ ಟ್ರಸ್ಟ್(ರಿ)

ಲೋಟಸ್

ಡಿ ಫಾರ್ಮಸಿ, ನರ್ಸಿಂಗ್(ಜಿ.ಎನ್.ಎಂ)

ಕಾಲೇಜು ತಾಳಿಕೋಟಿ


ಇರ್ಫಾನ್.ಕೆ
ಅಧ್ಯಕ್ಷರು


ಡಾ.ರಹೆಮಾನ್.ಎನ್
ನಿರ್ದೇಶಕರು

ಯಶಸ್ವಿ 8 ನೆಯ ವರ್ಷದತ್ತ ಪ್ರವೇಶಗಳು

ಪ್ರಾರಂಭವಾಗಿವೆ ಸೀಮಿತ ಸೀಟುಗಳು ಮಾತ್ರ

Lotus D-Pharmacy, Nursing College Talikoti

ನಮ್ಮ ಕಾಲೇಜಿನ ವಿಶೇಷತೆಗಳು

1) ಅನುಭವಿ ಹಾಗೂ ನುರಿತ ಉಪನ್ಯಾಸಕರಿಂದ ಬೋಧನೆ
2) ತಾಳಿಕೋಟಿ ವಿವಿಧ ಆಸ್ಪತ್ರೆಗಳಲ್ಲಿ ಪ್ರಾಯೋಗಿಕ ಕಲಿಕೆ
3) ಆರೋಗ್ಯ ಜಾಗೃತಿ ಮತ್ತು ಆರೋಗ್ಯ ಶಿಕ್ಷಣ ಚಟುವಟಿಕೆಗಳು
4) ಪರಿಸರ ಸ್ವಚ್ಛತೆ ಮತ್ತು ಆರೋಗ್ಯಕರ ಜೀವನ ಶೈಲಿ ಅರಿವು
5) ಸುಸರ್ಜಿತ ಕಟ್ಟಡಗಳು, ಆಧುನಿಕ ಲ್ಯಾಬ್‌ಗಳು, ಸ್ಮಾರ್ಟ್ ಕ್ಲಾಸಸ್, CC ಕ್ಯಾಮೆರಾ ಸುರಕ್ಷತೆ

ಡಿ-ಫಾರ್ಮಸಿ
(D-PHARMACY)
ವಿದ್ಯಾರ್ಹತೆ: ಪಿ.ಯು.ಸಿ ಸೈನ್ಸ್ ಪಾಸ್,
ಅವಧಿ: 2 ವರ್ಷ

ನರ್ಸಿಂಗ್
NURSING-GNM
ವಿದ್ಯಾರ್ಹತೆ: ದ್ವಿತೀಯ ಪಿ.ಯು.ಸಿ
ಕಲಾ-ವಿಜ್ಞಾನ-ವಾಣಿಜ್ಯ,
ಅವಧಿ: 3 ವರ್ಷ









ಅಂಜುಮನ್ ಪ್ರೌಢ ಶಾಲೆ
ಎದುರುಗಡೆ ಹುಣಸಗಿ ರೋಡ್
ತಾಳಿಕೋಟಿ ಜಿಲ್ಲೆ ವಿಜಯಪುರ

9663488384,8197143588,
7090454230,6364789760


ನೂರ್ ನಮಾಜ್‌ಕಟ್ಟಿ
ಕಾರ್ಯದರ್ಶಿಗಳು

ಬಳಗಾನೂರು ವಿರಕ್ತ ಮಠದಲ್ಲಿ ಸೆ.21ರಿಂದ ಹೇಮರಡ್ಡಿ ಮಲ್ಲಮ್ಮ ತಾಯಿ ಜೀವನದರ್ಶನ

ಸೆ.25ರಂದು ಚಂಡಿಹೋಮ, ಉಡಿ ತುಂಬುವ ಕಾರ್ಯಕ್ರಮ ಹಾಗೂ ಶ್ರೀ ಕುಮಾರೇಶ್ವರ ಜಯಂತಿ

❑ ನೈಜ್ಯ ದೆಸೆ ನ್ಯೂಸ್

ಬಳಗಾನೂರು: ಪಟ್ಟಣದ ವಿರಕ್ತ ಮಠದಲ್ಲಿ ಲಿಂ. ಕವಿತಾಳ ಬಸವಲಿಂಗ ಶಿವಯೋಗಿಗಳ ಪುಣ್ಯಾರಾಧನೆ, ಗಣೇಶ ವಿಸರ್ಜನೆ ಹಾಗೂ ಲೋಕಕಲ್ಯಾಣಾರ್ಥವಾಗಿ ಕೈಗೊಂಡಿರುವ ಮೌನಾನುಷ್ಠಾನ ಮಂಗಲದ ಅಂಗವಾಗಿ ಸೆ. 21ರಿಂದ ಸೆ.25ರವರೆಗೆ ವಿವಿಧ ಧಾರ್ಮಿಕ, ಆದ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಭಕ್ತಿಭಾವದಿಂದ ಹಮ್ಮಿಕೊಳ್ಳಲಾಗಿದೆ.ಅಭಿನವ ಶ್ರೀ ಮರಿ ಸಿದ್ದಬಸವ ಮಹಾಸ್ವಾಮಿಗಳು ಲೋಕಕಲ್ಯಾಣಾರ್ಥವಾಗಿ ಆ.28ರಿಂದ ಸೆ.25ರವರೆಗೆ ಮೌನಾನುಷ್ಠಾನ ಕೈಗೊಂಡಿದ್ದು, ಇದರ ಅನುಷ್ಠಾನ ಮಂಗಲದ ಅಂಗವಾಗಿ ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮ ತಾಯಿ ಜೀವನ ದರ್ಶನ ಪ್ರವಚನವನ್ನು ಐದು ದಿನಗಳ ಕಾಲ ಆಯೋಜಿಸಲಾಗಿದೆ ಎಂದು ವಿರಕ್ತ ಮಠದ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು ತಿಳಿಸಿದ್ದಾರೆ.ಭಕ್ತಿ, ತ್ಯಾಗದ ಬದುಕಿನ ದರ್ಶನ ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮ ತಾಯಿಯ ಜೀವನ ಹಾಗೂ ಆದರ್ಶಗಳನ್ನು ಜನರಿಗೆ ಪರಿಚಯಿಸುವ ಉದ್ದೇಶದಿಂದ ವಿಶೇಷ ಪ್ರವಚನ ಕಾರ್ಯಕ್ರಮ ಆಯೋಜಿಸಲಾಗಿದೆ. ಮಲ್ಲಮ್ಮ ತಾಯಿಯ ಜೀವನದಲ್ಲಿನ ಭಕ್ತಿ, ಧರ್ಮನಿಷ್ಠೆ, ತ್ಯಾಗ, ಸಹನೆ, ಮಾನವೀಯತೆ ಹಾಗೂ ಸಾತ್ವಿಕ ಬದುಕಿನ ಮೌಲ್ಯಗಳ ಕುರಿತು ಪ್ರವಚನದಲ್ಲಿ ವಿವರವಾಗಿ ತಿಳಿಸಿಕೊಡಲಾಗುವುದು.ಪುರಾಣ ಪ್ರವಚನಕಾರರಾದ ಡಾ. ಶರಭಯ್ಯ ಸ್ವಾಮಿ ಕಂಬಾಳಿಮಠ ಅವರು ಐದು ದಿನಗಳ ಕಾಲ ಹೇಮರಡ್ಡಿ ಮಲ್ಲಮ್ಮ ತಾಯಿ ಜೀವನ ದರ್ಶನದ ಕುರಿತು ಪ್ರವಚನ ನೀಡಲಿದ್ದಾರೆ. ಅವರ ಪ್ರವಚನವನ್ನು ಆಲಿಸಲು ಪಟ್ಟಣ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಂದ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವ ನಿರೀಕ್ಷೆಯಿದೆ.ಸೆ.25ರಂದು ವಿಶೇಷ ಧಾರ್ಮಿಕ ಕಾರ್ಯಕ್ರಮ ಸೆ.25ರಂದು ಮೌನಾನುಷ್ಠಾನದ ಮಂಗಲ ಕಾರ್ಯಕ್ರಮದ ಅಂಗವಾಗಿ ವಿಶೇಷ ಚಂಡಿಹೋಮ . ಧಾರ್ಮಿಕ ವಿಧಿವಿಧಾನಗಳ ನಂತರ ತಾಯಂದಿರಿಗೆ ಉಡಿ ತುಂಬುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇದೇ ಸಂದರ್ಭದಲ್ಲಿ ಶ್ರೀ ಕುಮಾರೇಶ್ವರ ಜಯಂತಿಯನ್ನು ಭಕ್ತಿಭಾವದಿಂದ ಆಚರಿಸಲಾಗುವುದು. ಕಾರ್ಯಕ್ರಮದಲ್ಲಿ ವಿವಿಧ ಮಠಗಳ ಸುಮಾರು 60 ಜನ ಮಹಾಸ್ವಾಮಿಗಳು ಭಾಗವಹಿಸಲಿದ್ದು, ಭಕ್ತರಿಗೆ ಆಶೀರ್ವಚನ ನೀಡಲಿದ್ದಾರೆ. ಐದು ದಿನಗಳ ಕಾಲ ನಡೆಯುವ ಧಾರ್ಮಿಕ ಕಾರ್ಯಕ್ರಮಗಳು ಮಠದ ಆಧ್ಯಾತ್ಮಿಕ ವಾತಾವರಣವನ್ನು ಮತ್ತಷ್ಟು ಪಾವನಗೊಳಿಸಲಿವೆ.ಸದ್ಭಕ್ತರಿಗೆ ಆಹ್ವಾನ ವಿರಕ್ತ ಮಠದ ವತಿಯಿಂದ ನಡೆಯಲಿರುವ ಈ ಧಾರ್ಮಿಕ ಕಾರ್ಯಕ್ರಮಗಳು ಎಲ್ಲರಿಗೂ ಮುಕ್ತವಾಗಿದ್ದು, ಬಳಗಾನೂರು ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಸದ್ಭಕ್ತರು ಕುಟುಂಬ ಸಮೇತರಾಗಿ ಭಾಗವಹಿಸಿ ಪ್ರವಚನವನ್ನು ಆಲಿಸಿ, ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ಶ್ರೀಮಠದ ಸದ್ಭಕ್ತರು ಮನವಿ ಮಾಡಿದ್ದಾರೆ.ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮ ತಾಯಿ ಜೀವನದ ಮೌಲ್ಯಗಳು ಹಾಗೂ ಧಾರ್ಮಿಕ ಸಂದೇಶಗಳು ಇಂದಿನ ಸಮಾಜಕ್ಕೆ ಪ್ರೇರಣೆಯಾಗಲಿದ್ದು, ಯುವಜನತೆ ಸೇರಿದಂತೆ ಎಲ್ಲ ವರ್ಗದವರು ಪ್ರವಚನದಲ್ಲಿ ಭಾಗವಹಿಸುವ ಮೂಲಕ ಜೀವನಾದರ್ಶಗಳನ್ನು ಅರಿತುಕೊಳ್ಳಬೇಕು ಎಂಬ ಆಶಯವನ್ನು ಮಠದ ವತಿಯಿಂದ ವ್ಯಕ್ತಪಡಿಸಲಾಗಿದೆ.





OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101